## ಸರ್ವ ಶಿಕ್ಷಣ ಅಭಿಯಾನ ಚಟುವಟಿಕೆಗಳ ಅನುಷ್ಠಾನಕ್ಕೆ ನಿಯಮಗಳು

| ಕ್ರ.ಸಂ. | ಚಟುವಟಿಕೆ | ಕಾಯಕ್ರಮ ಅನುಷ್ಠಾನ ಸಂಬಂಧಿತ ನಿಯಮಗಳು | ಆರ್ಥಿಕ ನಿಯಮಗಳು |
|---|---|---|---|
| | ಲಭ್ಯತೆ ಮತ್ತು ಶಾಲೆಯಲ್ಲಿ ಉಳಿಯುವಿಕೆ | | |
| 1. | ಶಾಲೆ ಮತ್ತು ಸಾಮಾಜಿಕ ಮ್ಯಾಪಿಂಗ್ | ಆರ್.ಟಿ.ಇ. ನಿಯಮದಲ್ಲಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಣ ಲಭ್ಯತೆಗಾಗಿ "ನೈಬರ್‌ಹುಡ್" ಶಾಲೆಗಳ ದೂರದ ಮಿತಿಯನ್ನು ವ್ಯಾಖ್ಯಾನಿಸಿದೆ.<br><br>ಶಾಲಾ ಲಭ್ಯತೆಯು ನೈಬರ್‌ಹುಡ್ ಶಾಲೆಗಳಿಗಿರುವ ಭೌತಿಕ ದೂರವಲ್ಲದೇ, ಸಾಮಾಜಿಕ ಅಭ್ಯಾಸಗಳ ಆಧಾರದ ಮೇಲಿನ ಜಾತಿ, ವರ್ಗ, ಲಿಂಗ ಮತ್ತು ವಿಶೇಷ ಅಗತ್ಯಗಳನ್ನು ಪರಿಗಣಿಸಬೇಕು.<br><br>ನೈಬರ್‌ಹುಡ್ ಶಾಲೆಯ ಮಿತಿಯಲ್ಲಿ ಮಕ್ಕಳಿಗೆ ಶಾಲಾ ಲಭ್ಯತೆ ಇರುವ ಬಗ್ಗೆ ರಾಜ್ಯವು ಖಚಿತವಾದ ನಿಲುವನ್ನು ಹೊಂದಿರಬೇಕು. ಇದು ನೈಬರ್‌ಹುಡ್ ಶಾಲೆಯ ಮ್ಯಾಪಿಂಗ್ / ಜನವಸತಿ ಪ್ರದೇಶಗಳನ್ನು ಶಾಲೆಗಳಿಗೆ ಜೋಡಿಸುವಿಕೆಯ ಅಗತ್ಯತೆಯನ್ನು ಹೊಂದಿರುತ್ತದೆ. ನೈಬರ್‌ಹುಡ್ ಶಾಲೆಯನ್ನು ಒಂದು ಅಥವಾ ಅದಕ್ಕಿಂತ ಹೆಚ್ಚು ಶಾಲೆಗಳಿಗೆ ಸೇರಿಸುವ ಸಾಧ್ಯತೆಗಳು ಇರುತ್ತದೆ. ಇದರಂತೆಯೇ ಶಾಲೆಗಳನ್ನೂ ಸಹ ಒಂದು ನೈಬರ್‌ಹುಡ್‌ಗಿಂತ ಹೆಚ್ಚಿನ ನೈಬರ್‌ಹುಡ್ ಶಾಲೆಗೆ ಸೇರ್ಪಡೆ ಮಾಡುವ ಅಗತ್ಯತೆ ಇದೆ. ಇದು ಹೊಸ ಶಾಲೆಯನ್ನು ತೆರೆಯಲು ಅಗತ್ಯವಿರುವ ಪರಿವೀಕ್ಷಣೆಗೆ ಸಹಾಯಕ ಮಾಡುತ್ತದೆ. | ಅ) ಸಾರ್ವತ್ರಿಕ ಶಾಲಾ ಲಭ್ಯತೆಯ ಚಾಪ್ಟರ್‌ನಲ್ಲಿ ವಿವರವಾಗಿ ಶಾಲಾ ಲಭ್ಯತೆಯ ಬಗ್ಗೆ ತಿಳಿಸಿದ್ದು, ಶಾಲಾ ಲಭ್ಯತೆಗೆ ಸಂಬಂಧಿಸಿದ ಎಲ್ಲಾ ಮಧ್ಯವರ್ತನೆಗಳನ್ನು ಅನುಸರಿಸುವುದು. ಶಾಲೆ ಮತ್ತು ಶಾಲಾ ಮ್ಯಾಪಿಂಗ್ ಅಗತ್ಯವಿರುವ ಅನುದಾನವನ್ನು ಸರ್ವ ಶಿಕ್ಷಣ ಅಭಿಯಾನ ಆಡಳಿತಾತ್ಮಕ ವೆಚ್ಚ ಅಥವಾ ಆರ್.ಇ.ಎಂ.ಎಸ್.ನಲ್ಲಿರುವ ಅನುದಾನದಲ್ಲಿ ಬಳಸಬಹುದು. |

| | | | |
|---|---|---|---|
| | | ನೈಬರ್‌ಹುಡ್ ಶಾಲೆಗೆ ಶಾಲಾ ಲಭ್ಯತೆಯ ಆಧಾರದ ಮೇಲೆ ಮ್ಯಾಪಿಂಗ್ ಮಾಡುವಾಗ ಶಾಲೆಯಲ್ಲಿರುವ ಸೀಟ್‌ಗಳು ಸೌಲಭ್ಯವಂಚಿತ ಗುಂಪುಗಳು ಹಾಗೂ ಹಿಂದುಳಿದ ಗುಂಪುಗಳ ಮಕ್ಕಳಿಗೆ, ಸರ್ಕಾರಿ ಶಾಲೆ ಮತ್ತು ಸ್ಥಳೀಯ ಸಂಸ್ಥೆಯಲ್ಲದೇ, ಅನುದಾನಿತ ಹಾಗೂ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿಯೂ ದಾಖಲಾತಿ ದೊರೆಯುವಂತೆ ನೋಡಿಕೊಳ್ಳಬೇಕು. | |
| 2 | ಹೊಸ ಶಾಲೆ ತೆರೆಯುವಿಕೆ. | ಅ) ರಾಜ್ಯ ಸರ್ಕಾರವು ಪ್ರಕಟಿಸಿರುವ ಕರ್ನಾಟಕ ರಾಜ್ಯ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ದೂರದ ಮಿತಿಯೊಳಗೆ ನೈಬರ್‌ಹುಡ್ ಶಾಲೆಯನ್ನು ಗುರ್ತಿಸಬೇಕು. | ಅ) ಆರ್.ಟಿ.ಇ. 2009ರ ಕಾಯಿದೆ ಪ್ರಕಾರ ಹೊಸ ಶಾಲೆಗಳಿಗೆ ಶಿಕ್ಷಕರು, ಭೌತಿಕ ಸೌಲಭ್ಯ ಮತ್ತು ಕಲಿಕಾ ಬೋಧನೋಪಕರಣಗಳನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಲ್ಲದೇ,<br>(1) ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ ಇಬ್ಬರು ಶಿಕ್ಷಕರು ; ದಾಖಲಾತಿಗೆ ತಕ್ಕಂತೆ ಹೆಚ್ಚುವರಿ ಶಿಕ್ಷಕರು.<br>(2) ಆರ್.ಟಿ.ಇ. ಕಾಯಿದೆಯಲ್ಲಿ ತಿಳಿಸಿರುವಂತೆ ಹೊಸ ಶಾಲೆಗೆ ಭೌತಿಕ ಸೌಲಭ್ಯಗಳಡಿ ಹೊಸ ಕಟ್ಟಡ. ರಾಜ್ಯ ಸರ್ಕಾರವು ಹೊಸ ಕಟ್ಟಡಕ್ಕೆ ಜಾಗ ಇರುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>(3) ರೂ.20,000/- ದಂತೆ ಪ್ರತಿ ಶಾಲೆಗೆ ಕಲಿಕಾ ಬೋಧನೋಪಕರಣಗಳ ಅನುದಾನ. |
| 3 | ಹೊಸ ಹಿರಿಯ ಪ್ರಾಥಮಿಕ ಶಾಲೆಗಳು / ತರಗತಿಗಳು | ಅ) ರಾಜ್ಯ ಸರ್ಕಾರವು ಪ್ರಕಟಿಸಿರುವ ಕರ್ನಾಟಕ ರಾಜ್ಯ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ ನಿಯಮಗಳಲ್ಲಿ ವ್ಯಾಖ್ಯಾನಿಸಿರುವ ದೂರದ ಮಿತಿಯೊಳಗೆ ಹೊಸ ಹಿರಿಯ ಪ್ರಾಥಮಿಕ ಶಾಲೆಗಳು ಸ್ಥಾಪನೆ.<br>ಆ) ಸಂಯುಕ್ತ ಪ್ರಾಥಮಿಕ ಶಾಲೆಗಳನ್ನು ಒದಗಿಸುವ ನಿಟ್ಟಿನಲ್ಲಿ, | ಅ) ಆರ್.ಟಿ.ಇ. 2009ರ ಕಾಯಿದೆ ಪ್ರಕಾರ ಹೊಸ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರು, ಭೌತಿಕ ಸೌಲಭ್ಯ ಮತ್ತು ಕಲಿಕಾ ಬೋಧನೋಪಕರಣಗಳನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಲ್ಲದೇ,<br>(1) ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ ಒಬ್ಬರು ಶಿಕ್ಷಕರು |

| | | | |
|---|---|---|---|
| | | ಸರ್ವ ಶಿಕ್ಷಣ ಅಭಿಯಾನ ಹೊಸ ನಿಯಮಗಳ ಪ್ರಕಾರ ಪ್ರಸ್ತುತ ಪ್ರಾಥಮಿಕ ಶಾಲೆ ಇರುವ ಕಡೆಯೇ ಹೊಸ ಹಿರಿಯ ಪ್ರಾಥಮಿಕ ಶಾಲೆ ತೆರೆಯಬೇಕು. ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸುವ ಮೂಲಕ ಹಿರಿಯ ಪ್ರಾಥಮಿಕ ಶಾಲಾ ಸೌಲಭ್ಯವನ್ನು ಒದಗಿಸುವುದು. ಇದರಿಂದ ಶಾಲೆಯು 1 ರಿಂದ 8ನೇ ತರಗತಿಯನ್ನು ಹೊಂದಿರುವ ಸಂಯುಕ್ತ ಪ್ರಾಥಮಿಕ ಶಾಲೆಯಾಗುತ್ತದೆ. | ಮತ್ತು ಕನಿಷ್ಠ (1) ವಿಜ್ಞಾನ ಮತ್ತು ಗಣಿತ (2) ಸಮಾಜಶಾಸ್ತ್ರ (3) ಭಾಷೆಗೆ ಶಿಕ್ಷಕರಿರಬೇಕು. ಪ್ರತಿ ಶಾಲೆಯ ದಾಖಲಾತಿಗೆ ತಕ್ಕಂತೆ ಹೆಚ್ಚುವರಿ ಶಿಕ್ಷಕರನ್ನು ನೀಡಬೇಕು.<br>(2) ಆರ್.ಟಿ.ಇ. ಕಾಯಿದೆಯಲ್ಲಿ ತಿಳಿಸಿರುವಂತೆ ಹೊಸ ಹಿರಿಯ ಪ್ರಾಥಮಿಕ ಶಾಲೆಗೆ ಭೌತಿಕ ಸೌಲಭ್ಯಗಳಡಿ ಹೊಸ ಕಟ್ಟಡ, ಆದಷ್ಟೂ ಪ್ರಸ್ತುತ ಇರುವ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿಯೇ . ರಾಜ್ಯ ಸರ್ಕಾರವು ಹೊಸ ಕಟ್ಟಡಕ್ಕೆ ಜಾಗ ಇರುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>(3) ರೂ.50,000/- ದಂತೆ ಪ್ರತಿ ಶಾಲೆಗೆ ಕಲಿಕಾ ಬೋಧನೋಪಕರಣಗಳ ಅನುದಾನ. |
| 4 | ಇ.ಜಿ.ಎಸ್. ಸೆಂಟರ್‌ಗಳನ್ನು ಪ್ರಾಥಮಿಕ ಶಾಲೆಗಳಾಗಿ ಮಾರ್ಪಡಿಸುವಿಕೆ. | ಅ) ಸರ್ವ ಶಿಕ್ಷಣ ಅಭಿಯಾನದಡಿ ನಡೆಯುತ್ತಿರುವ, ಎರಡು ವರ್ಷ ಪೂರ್ಣಗೊಂಡ, ಇ.ಜಿ.ಎಸ್. ಕೇಂದ್ರಗಳನ್ನು ಪ್ರಾಥಮಿಕ ಶಾಲೆಗಳಾಗಿ ಪರಿವರ್ತಿಸಬಹುದು ಅಥವಾ ನೈಬರ್‌ಹುಡ್ ಶಾಲೆಗಳಿಗೆ ಮಕ್ಕಳು ಮುಖ್ಯವಾಹಿನಿಗೆ ಸೇರ್ಪಡೆಯಾದಲ್ಲಿ ಇದನ್ನು ಮುಕ್ತಾಯಗೊಳಿಸಬಹುದು.<br>ಆರ್.ಟಿ.ಇ. ಕಾಯಿದೆ ಅನುಷ್ಠಾನಗೊಂಡ ಎರಡು ವರ್ಷಗಳಲ್ಲಿ ಎಲ್ಲಾ ಇ.ಜಿ.ಎಸ್. ಕೇಂದ್ರಗಳನ್ನು ಪ್ರಾಥಮಿಕ ಶಾಲೆಗಳಾಗಿ ಮಾರ್ಪಡಿಸಬೇಕು. 2010-11ರ ನಂತರ ಯಾವುದೇ ಹೊಸ ಇ.ಜಿ.ಎಸ್ ಕೇಂದ್ರಗಳನ್ನು ತೆರೆಯಲು ಅನುಮೋದನೆ ನೀಡುವುದಿಲ್ಲ. | ಇ.ಜಿ.ಎಸ್. ಕೇಂದ್ರಗಳನ್ನು ಶಾಲೆಗಳಾಗಿ ಪರಿವರ್ತಿಸಲು;<br>ಅ) ಆರ್.ಟಿ.ಇ. 2009ರ ಕಾಯಿದೆ ಪ್ರಕಾರ ಹೊಸ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರು, ಭೌತಿಕ ಸೌಲಭ್ಯ ಮತ್ತು ಕಲಿಕಾ ಬೋಧನೋಪಕರಣಗಳನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಲ್ಲದೇ,<br>(1) ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ ಇಬ್ಬರು ಶಿಕ್ಷಕರು ; ದಾಖಲಾತಿಗೆ ತಕ್ಕಂತೆ ಹೆಚ್ಚುವರಿ ಶಿಕ್ಷಕರು.<br>(2) ಆರ್.ಟಿ.ಇ. ಕಾಯಿದೆಯಲ್ಲಿ ತಿಳಿಸಿರುವಂತೆ ಹೊಸ ಶಾಲೆಗೆ ಭೌತಿಕ ಸೌಲಭ್ಯಗಳಡಿ ಹೊಸ ಕಟ್ಟಡ. ರಾಜ್ಯ ಸರ್ಕಾರವು ಹೊಸ ಕಟ್ಟಡಕ್ಕೆ ಜಾಗ ಇರುವುದರ ಬಗ್ಗೆ ಖಚಿತಪಡಿಸಿಕೊಳ್ಳಬೇಕು.<br>(3) ರೂ.20,000/- ದಂತೆ ಪ್ರತಿ ಶಾಲೆಗೆ ಕಲಿಕಾ ಬೋಧನೋಪಕರಣಗಳ ಅನುದಾನ. |

| | | | |
|---|---|---|---|
| | | | ಆ) ಆರ್.ಟಿ.ಇ. ಕಾಯಿದೆ ಅನುಷ್ಠಾನ ಪ್ರಕಾರ ಗರಿಷ್ಠ ಎರಡು ವರ್ಷಗಳವರೆಗೆ ಇ.ಜಿ.ಎಸ್. ಮುಂದುವರೆಸಲು,<br>(1) ಪ್ರತಿ ಕೇಂದ್ರಕ್ಕೆ ದಾಖಲಾಗುವ ಮಕ್ಕಳ ಸಂಖ್ಯೆಯ ಮೇಲೆ ವೆಚ್ಚ ನಿರ್ಧರಿತವಾಗುತ್ತದೆ. ಆದರೂ, ನಿಯಮ ಪ್ರಕಾರ ಒಟ್ಟು ಜಿಲ್ಲೆಯನ್ನು ಪರಿಗಣಿಸಿ, ಪ್ರತಿ ಮಗುವಿಗೆ ಪ್ರತಿ ವರ್ಷಕ್ಕೆ ಪ್ರಾಥಮಿಕ ಹಂತದ ಕೇಂದ್ರಕ್ಕೆ ರೂ.1535/- ಹಾಗೂ ಪ್ರತಿ ಮಗುವಿಗೆ ಪ್ರತಿ ವರ್ಷಕ್ಕೆ ಹಿರಿಯ ಪ್ರಾಥಮಿಕ ಹಂತದ ಕೇಂದ್ರಕ್ಕೆ ರೂ.2960/- ಮೀರಬಾರದು.<br>(2) ಇ.ಜಿ.ಎಸ್.ಕೇಂದ್ರದ ಸ್ವಯಂಸೇವಕರಿಗೆ ಪ್ರತಿ ತಿಂಗಳಿಗೆ ರೂ.2500/-ಕ್ಕೆ ಮೀರದಂತೆ ಗೌರವಧನ.<br>(3) ಚಟುವಟಿಕೆಯ ವೆಚ್ಚವನ್ನು ಪ್ರತಿ ಚಟುವಟಿಕೆವಾರು ವಿವರಗಳನ್ನು ಸರ್ವ ಶಿಕ್ಷಣ ಅಭಿಯಾನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. |
| 5 | ವಸತಿಯುತ ಶಾಲೆಗಳು | ಅ) ಶಿಕ್ಷಣ ವಂಚಿತ ಮಕ್ಕಳನ್ನು ತಲುಪಲು ಸಹಾಯ;<br>(1) ಹೊಸ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸಾಧ್ಯವಿಲ್ಲದ ಪ್ರದೇಶಗಳಾದ ಕಡಿಮೆ ಹಾಗೂ ವಿಸ್ತರಿಸಿದ ಜನವಸತಿಗಳು, ಭೌತಿಕವಾಗಿ ತಲುಪಲು ಕಷ್ಟಸಾಧ್ಯವಾದ ಗುಡ್ಡಗಾಡು ಪ್ರದೇಶಗಳು, ಮಲೆನಾಡು ಪ್ರದೇಶಗಳು, ಕಾಡಿನಿಂದಾವೃತ ಪ್ರದೇಶಗಳಲ್ಲಿ ತೆರೆಯಬಹುದು, ಮತ್ತು<br>(2) ನಗರ ಸೌಲಭ್ಯವಂಚಿತ ಮಕ್ಕಳು, ಮನೆ ಇಲ್ಲದ ಮಕ್ಕಳು ಹಾಗೂ ಬೀದಿ ಮಕ್ಕಳು, ಕಠಿಣ ಪರಿಸ್ಥಿತಿಯಲ್ಲಿನ ಮಕ್ಕಳು ಹಾಗೂ ಪೋಷಕರ ರಕ್ಷಣೆ ಇಲ್ಲದ ಮಕ್ಕಳು, ಬೆಳಗಿನ | ಅ) ವಸತಿಯುತ ಶಾಲೆಗಳಿಗೆ ಕೆ.ಜಿ.ಬಿ.ವಿ. ಶಾಲೆಗಳಂತೆಯೇ ಆವರ್ತಕ (ರಿಕರಿಂಗ್) ಹಾಗೂ ಅನಾವರ್ತಕ (ನಾನ್-ರಿಕರಿಂಗ್) ಅನುದಾನ.<br>(ಆ) ಕೆ.ಜಿ.ಬಿ.ವಿ. ನಿಯಮದಂತೆಯೇ ಹೊಸ ಶಾಲಾ ಕಟ್ಟಡ ನಿರ್ಮಾಣ ವೆಚ್ಚ ಅನುಮೋದನೆ.<br>(ಇ) ಸಾರ್ವಜನಿಕ ಕಟ್ಟಡಗಳನ್ನು ಬಳಸಿಕೊಳ್ಳುವುದು ಹಾಗೂ ಹಳೆಯ ಉಪಯೋಗವಿಲ್ಲದ ಶಾಲಾ ಜಾಗವನ್ನು ವಸತಿಯಾಗಿ ಮಾರ್ಪಡಿಸಲು, ರೀಫರ್ಬಿಷಿಂಗ್ ವೆಚ್ಚವು ಪ್ರತಿ ಕಟ್ಟಡದ ವಿಷಯಕ್ಕೆ ತಕ್ಕಂತೆ. (ಛಿಚಿಜ ಐಂ ಛಿಚಿಜ ೩ಟ್ಟಿ)<br>(ಈ) ವಸತಿಯುತ ಶಾಲೆಯ ಕಟ್ಟಡ ನಿರ್ಮಾಣ ವೆಚ್ಚವು ಪ್ರತಿ |

| | | | |
|---|---|---|---|
| | | ಶಾಲೆಗಳಿಗೆ ಹೋಗಲಾಗದ ಮಕ್ಕಳಿಗೆ ಅಗತ್ಯವಿರುವ ಶಾಲೆ, ಜೊತೆಗೆ ಇರಲು ವಸತಿ ಸೌಲಭ್ಯ ಕಲ್ಪಿಸಬೇಕು. | ಜಿಲ್ಲೆಗೆ ಸಿವಿಲ್ ಕಾಮಗಾರಿಗೆ ನಿಗದಿ ಪಡಿಸಿದ ಸೀಲಿಂಗ್‌ನಲ್ಲಿ ಇರಬೇಕು. |
| 6 | ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಯಸ್ಸಿಗನುಗುಣವಾಗಿ ದಾಖಲುಗೊಳಿಸಲು ವಿಶೇಷ ತರಬೇತಿ. | ಅ) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಯಸ್ಸಿಗನುಗುಣವಾಗಿ ದಾಖಲುಗೊಳಿಸಲು ನೀಡುವ ವಿಶೇಷ ತರಬೇತಿಯು ಮಗು ಶೈಕ್ಷಣಿಕವಾಗಿ ಹಾಗೂ ಭಾವನಾತ್ಮಕವಾಗಿ ಉಳಿದ ತರಗತಿಗಳ ಅಭ್ಯಾಸವನ್ನು ಪೂರೈಸಲು ಅನುವು ಮಾಡಿಕೊಡುವುದಾಗಿದೆ.<br>(ಆ) ವಿಶೇಷ ತರಬೇತಿಯು ;<br>(1) ಆರ್.ಟಿ.ಇ. 2009 ರ ಕಾಯಿದೆ ಪ್ರಕಾರ ಗುರ್ತಿಸಿದ ಅಕಾಡೆಮಿಕ್ ಅಥಾರಿಟಿ (ಶೈಕ್ಷಣಿಕ ಸಂಸ್ಥೆ) ಮೂಲಕ ವಯಸ್ಸಿಗುನುಗುಣವಾದ ಕಲಿಕೆಯ ವಿಷಯಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಬೇಕು.<br>(2) ವಿಶೇಷ ತರಬೇತಿ ನೀಡಲು ಇಂತಹ ಮಕ್ಕಳ ಆಳ ಮತ್ತು ಸಂಕೀರ್ಣತೆಯನ್ನು ಅಭ್ಯಾಸ ಮಾಡಿರುವ ಹಾಗೂ ಇಂತಹ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ, ಆಸಕ್ತಿಯಿರುವ ಸಂಸ್ಥೆಗಳನ್ನು ಗುರ್ತಿಸಬೇಕು. ಅನೇಕ ಸ್ವಯಂಸೇವಾ ಸಂಸ್ಥೆಗಳು ಇಂತಹ ಅನುಭವವನ್ನು ಹೊಂದಿದ್ದು, ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದು, ಅಂತಹವರು ಆರ್.ಟಿ.ಇ. ಕಾಯಿದೆ ಪ್ರಕಾರ ಮುಖ್ಯ ಪಾಲುದಾರರಾಗಬಹುದು.<br>(3) ಸ್ವಯಂಸೇವಾ ಸಂಸ್ಥೆಗಳಿಂದ ಎ.ಐ.ಇ. ಕೇಂದ್ರಗಳನ್ನು ನಡೆಸುತ್ತಿರುವವರು, ಆರ್.ಟಿ.ಇ. ಪ್ರಕಾರ ಗುರ್ತಿಸಿದ ಶೈಕ್ಷಣಿಕ ಸಂಸ್ಥೆಯ ವಿಶೇಷ ತರಬೇತಿಯ ಕಲಿಕಾ ವಿಷಯಗಳನ್ನು ಉಪಯೋಗಿಸಿ, ಕೇಂದ್ರವನ್ನು ವಿಶೇಷ ತರಬೇತಿ | ಅ) ವಸತಿರಹಿತ ತರಬೇತಿಗೆ ಪ್ರತಿ ವರ್ಷಕ್ಕೆ ಪ್ರತಿ ಮಗುವಿಗೆ ರೂ.6000/-.<br>ಆ) ವಸತಿ ಸಹಿತ ತರಬೇತಿಗೆ ಪ್ರತಿ ವರ್ಷಕ್ಕೆ ಪ್ರತಿ ಮಗುವಿಗೆ ರೂ.20,000/-<br>ಇ) ವಿವಿಧ ರೀತಿಯ ಮಕ್ಕಳಿಗೆ ಅಗತ್ಯವಿರುವ ಚಟುವಟಿಕೆಗಳ ವಿವರವನ್ನು ತಯಾರಿಸಿ, ವೆಚ್ಚದ ವಿವರವನ್ನು ನಿಗಿದಿತ ಮಿತಿಗೊಳಪಟ್ಟು ಸರ್ವ ಶಿಕ್ಷಣ ಅಭಿಯಾನ ಕಾರ್ಯಕಾರಿ ಸಮಿತಿಯಿಂದ ಅನುಮೋದನೆ ಪಡೆಯಬೇಕು. |

| | | | |
|---|---|---|---|
| | | ಕೇಂದ್ರಗಳಾಗಿ ಪರಿವರ್ತಿಸಿಕೊಳ್ಳಬಹುದು.<br>(4) ಪ್ರಸ್ತುತ ಇರುವ ಶಾಲಾ ಅವರಣದಲ್ಲಿಯೇ ವಿಶೇಷ ತರಬೇತಿಗಳನ್ನು ನೀಡಬಹುದು ಅಥವಾ ಆರ್.ಟಿ.ಇ. 2009ರ ಕಾಯಿದೆ ಪ್ರಕಾರ ಉತ್ತಮ ವಸತಿ ಸೌಲಭ್ಯವನ್ನು ನೀಡಿರುವ ಸ್ಥಳದಲ್ಲಿ ನೀಡಬಹುದು.<br>(5) ಶಾಲೆಯಲ್ಲಿರುವ ಶಿಕ್ಷಕರಿಂದಲೇ ವಿಶೇಷ ತರಬೇತಿ ನೀಡಬಹುದು ಅಥವಾ ಇದಕ್ಕಾಗಿ ಬೇರೆ ಶಿಕ್ಷಕರನ್ನು ತೆಗೆದುಕೊಳ್ಳಬಹುದು. ಇಂತಹ ಶಿಕ್ಷಕರಿಗೆ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ವಿಶೇಷ ತರಬೇತಿ ನೀಡಲು ಶಿಕ್ಷಕರ ತರಬೇತಿಯನ್ನು ನೀಡುವುದು.<br>(6) ವಿಶೇಷ ತರಬೇತಿ ನೀಡುವ ಅವಧಿಯು ಕನಿಷ್ಠ ಮೂರು ತಿಂಗಳಾಗಿದ್ದು, ಮಗುವಿನ ಕಾಲಾನುಕ್ರಮದ ಕಲಿಕೆಯ ಆಧಾರದ ಮೇಲೆ ವಿಸ್ತರಿಸಬಹುದು, ಈ ವಿಸ್ತರಣೆಯು ಎರಡು ವರ್ಷಗಳ ಅವಧಿಯನ್ನು ಮೀರುವಂತಿಲ್ಲ.<br>(7) ಅಗತ್ಯಕ್ಕೆ ತಕ್ಕಂತೆ ವಸತಿ ಸಹಿತ ಹಾಗೂ ವಸತಿ ರಹಿತ ವಿಶೇಷ ತರಬೇತಿಗಳನ್ನು ನೀಡಬಹುದು.<br>(8) ವಿಶೇಷ ತರಬೇತಿಯ ಮೂಲಕ ವಯೋಮಾನಕ್ಕನುಗುಣವಾಗಿ ಮುಖ್ಯವಾಹಿನಿಗೆ ದಾಖಲಾದ ಮಗುವಿಗೆ 14ವರ್ಷಗಳ ವಯೋಮಾನದ ನಂತರವೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಅವಕಾಶವಿದೆ. | |
| 7 | ಸಾರಿಗೆ / ಕಾವಲು (ರಕ್ಷಣೆ) ಸೌಲಭ್ಯ | ಅ) ಸಾರಿಗೆ / ರಕ್ಷಣೆ ಸೌಲಭ್ಯವನ್ನು ಒದಗಿಸುವುದು ಒಂದು ವಿನಾಯಿತಿ (ಎಕ್ಸೆಪೆಷನ್) ಕ್ರಮವಾಗಿದೆ. ಇದನ್ನು ರಾಷ್ಟ್ರಮಟ್ಟದಲ್ಲಿ ವಿನಾಯಿತಿ ಪರಿಸ್ಥಿತಿಗಳಿಗಾಗಿ, ಯೋಜನಾ | ಅ) ಪ್ರತಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುಮೋದನಾ ಮಂಡಳಿಯು ಪ್ರಸ್ತಾವನೆ ಪ್ರಕಾರ ಅನುಮೋದಿಸದರೂ, ಆರ್ಥಿಕವಾಗಿ ಪ್ರತಿ ಮಗುವಿಗೆ ಪ್ರತಿ |

| | | | |
|---|---|---|---|
| | | ಅನುಮೋದನಾ ಮಂಡಳಿಯಲ್ಲಿ ರಾಜ್ಯವು ಪ್ರಸ್ತುತ ಪಡಿಸುವ ಪ್ರಸೆಂಟೇಷನ್ ಆಧಾರದಲ್ಲಿ ಅನುಮೋದಿಸಲಾಗುತ್ತದೆ;<br>(1) ಹೊಸ ಶಾಲೆ ತೆರೆಯಲು ಸಾಧ್ಯವಿಲ್ಲದ ದೂರದ ಹಾಗೂ ವಿರಳ ಜನವಸತಿ ಪ್ರದೇಶ, ಮತ್ತು<br>(2) ನಗರ ಪ್ರದೇಶಗಳಲ್ಲಿ ಸ್ಥಳದ ಆಭಾವದಿಂದ ಶಾಲೆ ತೆರೆಯಲು ಸಾಧ್ಯವಿಲ್ಲದಾಗ ನಗರ ಸೌಲಭ್ಯವಂಚಿತ ಮಕ್ಕಳಿಗೆ / ಪೋಷಕರ ರಕ್ಷಣೆಯಿಲ್ಲದ ಮಕ್ಕಳಿಗೆ.<br>ಆ) ರಾಜ್ಯ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ ಮಿತಿಯನ್ನು ನೈಬರ್‌ಹುಡ್ ಶಾಲೆಗಳಿಗೆ ಸಂಬಂಧಿಸಿದಂತೆ ನಮೂದಿಸಿರಬೇಕು.<br>ಇ) ಸಾರಿಗೆ ಸೌಲಭ್ಯಕ್ಕಾಗಿ ನಿರ್ದಿಷ್ಟ ವಿಶೇಷ ಜಿಲ್ಲೆಗಳ ಪ್ರಸ್ತಾವನೆಯನ್ನು, ರಾಜ್ಯವು ಸರಿಯಾದ ಅಗತ್ಯತೆಯನ್ನು ವಿವರಿಸಿದಲ್ಲಿ ಅಪ್ರೈಸಲ್ ಮಾಡಲಾಗುವುದು. | ವರ್ಷಕ್ಕೆ ರೂ.3000/- ಮೀರುವಂತಿಲ್ಲ. |
| ಗುಣಮಟ್ಟ | | | |
| 8 | ಹೆಚ್ಚುವರಿ ಶಿಕ್ಷಕರು | ಅ) ಆರ್.ಟಿ.ಇ. ನಿಯಮದ ಪ್ರಕಾರ ದಾಖಲಾತಿಗನುಗುಣವಾಗಿ ಎಲ್ಲಾ ಸರ್ಕಾರಿ, ಸ್ಥಳೀಯ ಸಂಸ್ಥೆ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ನೀಡಲಾಗುತ್ತದೆ ಆದರೂ, ರಾಜ್ಯ ವಲಯದಡಿ ನಿವೃತ್ತಿ ಹಾಗೂ ಮುಂತಾದ ಕಾರಣಗಳಿಂದಾಗುವ ಖಾಲಿ ಹುದ್ದೆಗಳನ್ನು ಸರ್ವ ಶಿಕ್ಷಣ ಅಭಿಯಾನದಡಿ ತುಂಬಲು ಅನುಮೋದನೆ ನೀಡುವುದಿಲ್ಲ.<br>ಆ) ಸರ್ವ ಶಿಕ್ಷಣ ಅಭಿಯಾನದಡಿ 50% ಮಹಿಳಾ ಶಿಕ್ಷಕರನ್ನು ನೇಮಿಸಬೇಕು ಎಂಬ ನಿಯಮವು ಮುಂದುವರಿಯುತ್ತದೆ. | ಅ) ತರಗತಿ 1 ರಿಂದ 5ರವರೆಗೆ<br>(1) 60 ಮಕ್ಕಳವರೆಗೆ ಇಬ್ಬರು ಶಿಕ್ಷಕರು<br>(2) 61-90 ಮಕ್ಕಳಿಗೆ ಮೂರು ಶಿಕ್ಷಕರು<br>(3) 91-120 ಮಕ್ಕಳಿಗೆ ನಾಲ್ಕು ಶಿಕ್ಷಕರು<br>(4) 121-200 ಮಕ್ಕಳಿಗೆ ಐದು ಶಿಕ್ಷಕರು<br>(5) ಸುಮಾರು 150 ಮಕ್ಕಳಿಗಿಂತ ಹೆಚ್ಚಿದಲ್ಲಿ, ಐದು ಶಿಕ್ಷಕರಲ್ಲದೇ, ಒಬ್ಬರು ಮುಖ್ಯೋಪಾಧ್ಯಾಯರು.<br>(6) ಶಾಲೆಯಲ್ಲಿ 200 ಮಕ್ಕಳಿಗಿಂತ ಹೆಚ್ಚಿದ್ದರೆ, ಮಕ್ಕಳ ಶಿಕ್ಷಕರ |

| | | | |
|---|---|---|---|
| | | ಇ) ನಗರ-ಗ್ರಾಮೀಣ ಪ್ರದೇಶಗಳಲ್ಲಿ ಅಂತರವಿಲ್ಲದಂತೆ ತರ್ಕಬದ್ಧವಾಗಿ ಪ್ರಸ್ತುತ ಇರುವ ಶಿಕ್ಷಕರನ್ನು ರಿಡಿಪ್ಲಾಯ್‌ಮೆಂಟ್ ಮಾಡಬೇಕು.<br>ಈ) ರಾಜ್ಯವು ಪ್ರತಿ ಶಾಲೆಯಲ್ಲಿ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ನಿರ್ವಹಿಸಬೇಕು.ಉ) ಶಿಕ್ಷಕರ ಖಾಲಿ ಹುದ್ದೆಯು ಒಟ್ಟು ಅನುಮೋದಿತ ಸಂಖ್ಯೆಗಿಂತ 10% ಮೀರಬಾರದು.<br>ಊ) ಆರ್.ಟಿ.ಇ. ಕಾಯಿದೆಯ ಸೆಕ್ಷನ್ 23ರಲ್ಲಿ ನಮೂದಿಸಿದಂತೆ ಎನ್.ಸಿ.ಟಿ.ಇ. ನಿಯಮದ ಪ್ರಕಾರ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ ಶಿಕ್ಷಕರನ್ನು ನೇಮಕ ಮಾಡಬೇಕು.<br>ಊ) ಆರ್.ಟಿ.ಇ. ಕಾಯಿದೆ ಪ್ರಕಾರ ತರಬೇತಿ ಹೊಂದಿದ ಶಿಕ್ಷಕರು ಅಗತ್ಯವಿದ್ದಷ್ಟು ಸಂಖ್ಯೆಯಲ್ಲಿ ರಾಜ್ಯದಲ್ಲಿ ದೊರೆಯದಿದ್ದಲ್ಲಿ, ರಾಜ್ಯವು ನಿಯಮವನ್ನು ಸಡಿಲಿಸಲು ಕೇಂದ್ರ ಸರ್ಕಾರವನ್ನು ಕೋರಬಹುದಾಗಿದೆ. ಈ ರೀತಿ ನಿಯಮ ಸಡಿಲಿಕೆ ಕೋರಿದಾಗಿ ತರಬೇತಿ ಹೊಂದಿಲ್ಲದ ಶಿಕ್ಷಕರಿಗೆ ನಿರ್ಧರಿತ ಸಮಯದಲ್ಲಿ ತರಬೇತಿ ನೀಡುವ ಬಗ್ಗೆ ಆರ್.ಟಿ.ಇ. ನಿಯಮದ ಪ್ರಕಾರ ಕೇಂದ್ರ ಸರ್ಕಾರಕ್ಕೆ ಬದ್ಧತೆ (ಕಮಿಟ್‌ಮೆಂಟ್) ನೀಡಬೇಕಾಗುತ್ತದೆ. | ಅನುಪಾತವು 40ನ್ನು ಮೀರುವಂತಿಲ್ಲ (ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ)<br>ಆ) ತರಗತಿ 6 ರಿಂದ 8ರವರೆಗೆ<br>(1) ಕನಿಷ್ಟ ಒಂದು ತರಗತಿಗೆ ಒಬ್ಬರು ಶಿಕ್ಷಕರು, ಇದರಲ್ಲಿ ಪ್ರತಿ (ಅ) ವಿಜ್ಞಾನ ಮತ್ತು ಗಣಿತ (ಆ) ಸಮಾಜಶಾಸ್ತ್ರ, (ಇ) ಭಾಷೆಗೆ ಒಬ್ಬರು ಶಿಕ್ಷಕರು.<br>(2) ಪ್ರತಿ 35 ಮಕ್ಕಳಿಗೆ ಕನಿಷ್ಠ ಒಬ್ಬರು ಶಿಕ್ಷಕರು.<br>(3) ಮಕ್ಕಳ ದಾಖಲಾತಿಯು 100ಕ್ಕಿಂತ ಹೆಚ್ಚಾದಲ್ಲಿ;<br>· ಪೂರ್ಣಕಾಲಿಕ ಮುಖ್ಯೋಪಾಧ್ಯಾಯರು<br>· ಕಲಾ ಶಿಕ್ಷಣ, ಆರೋಗ್ಯ ಮತ್ತು ದೈಹಿಕ ಶಿಕ್ಷಣ ಮತ್ತು ವರ್ಕ್ ಎಜುಕೇಷನ್‌ಗೆ ಅರೆಕಾಲಿಕ ಶಿಕ್ಷಕರು<br>(ಇ) ಆಯಾ ರಾಜ್ಯ / ಕೇಂದ್ರಾಡಳಿತ ಪ್ರದೇಶದ ನಿಯಮಗಳಂತೆ ಶಿಕ್ಷಕರ ನೇಮಕ ಮಾಡುವುದು. |
| 9 | ಸಮವಸ್ತ್ರ | ಅ) ಆರ್.ಟಿ.ಇ. ಪ್ರಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಕಡ್ಡಾಯ ನಿಯಮವಾಗಿರುತ್ತದೆ. ಬಡ ಮಕ್ಕಳಿಗೆ ಸಮವಸ್ತ್ರಕ್ಕೆ ಹಣ ವೆಚ್ಚ ಮಾಡುವುದು ಕಷ್ಟವಾಗಿದ್ದು, ಅದರಿಂದಲೇ ಅವರು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದು ಸಾಧ್ಯವಾಗುವುದಿಲ್ಲ.<br>ಆ) ಸಮವಸ್ತ್ರದ ಉದ್ದೇಶವೆಂದರೆ ಮಕ್ಕಳಿಗೆ ಶಾಲೆಗೆ ಸೇರಿದವರು ಎಂಬ | ಅ) ವರ್ಷಕ್ಕೆ ರೂ.400/-ಗಳಿಗೆ ಮೀರದಂತೆ ಸರ್ಕಾರಿ ಶಾಲೆಯಲ್ಲಿನ ಎಲ್ಲಾ ಹೆಣ್ಣು ಮಕ್ಕಳಿಗೆ, ಪ.ಜಾತಿ/ಪ.ಪಂ/ಬಡತನ ರೇಖೆಗಿಂತ ಕೆಳಗಿರುವ ಮಕ್ಕಳಿಗೆ 2 ಜೊತೆ ಸಮವಸ್ತ್ರ.<br>ಆ) 2009-10ನೇ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ರಾಜ್ಯವಲಯದಡಿ ಸಮವಸ್ತ್ರ ನೀಡುತ್ತಿದ್ದಲ್ಲಿ ಅದನ್ನು |

| | | | |
|---|---|---|---|
| | | ಮನೋಭಾವ ಬರಲು ಮಾತ್ರವಲ್ಲದೇ, ಪ್ರಭುತ್ವ ಸಾಧಿಸುದಲ್ಲ. ಆದುದರಿಂದ ಇದು ಕೇಂದ್ರೀಕೃತವಾಗುವ ಬದಲು ಸ್ಥಳೀಯ ವಿನ್ಯಾಸದಲ್ಲಿ ಇರುವುದು ಸೂಕ್ತ. | ರಾಜ್ಯವಲಯದಲ್ಲಿಯೇ ಮುಂದುವರೆಸುವುದು.<br>ಇ) ರಾಜ್ಯವಲಯದಡಿ ಸಮವಸ್ತ್ರಕ್ಕಾಗಿ ಸ್ವಲ್ಪ ಭಾಗ ಅನುದಾನವನ್ನು ಮಾತ್ರ ನೀಡುತ್ತಿದ್ದಲ್ಲಿ, ಇನ್ನುಳಿದ ಭಾಗದ ಅನುದಾನಕ್ಕಾಗಿ ಸರ್ವ ಶಿಕ್ಷಣ ಅಭಿಯಾನದಡಿ ಘಟಕ ವೆಚ್ಚದಂತೆ ಸಹಾಯ ಪಡೆಯಬಹುದು.<br>ಈ) ಕೇಂದ್ರ ಸರ್ಕಾರದ ಅನುದಾನ ಪಡೆಯಬೇಕಾದಲ್ಲಿ, ರಾಜ್ಯ ಆರ್.ಟಿ.ಇ. ನಿಯಮದಡಿ ಮಕ್ಕಳು ಸಮವಸ್ತ್ರಕ್ಕೆ ಅರ್ಹರಾಗಿರುವ ಬಗ್ಗೆ ನಮೂದಿಸಿರಬೇಕು.<br>ಉ) ಸಮವಸ್ತ್ರದ ಖರೀದಿಯನ್ನು ಶಾಲಾ ಹಂತಕ್ಕೆ ವಿಕೇಂದ್ರೀಕರಣ ಮಾಡಬೇಕು. ರಾಜ್ಯ, ಜಿಲ್ಲೆ, ಅಥವಾ ಬ್ಲಾಕ್‌ಹಂತದಲ್ಲಿ ಕೇಂದ್ರೀಕೃತವಾಗಿ ಖರೀದಿಸುವಂತಿಲ್ಲ.<br>ಊ) ಶಾಲಾ ಮಟ್ಟದಲ್ಲಿ ಶಾಲಾ ಆಡಳಿತಾಧಿಕಾರಿಗಳು ಸಮವಸ್ತ್ರವನ್ನು ನೀಡಲು ಸಾಧ್ಯವಿಲ್ಲವೆಂದಲ್ಲಿ, ಅದನ್ನು ಹಣದ ರೂಪದಲ್ಲಿ ನೀಡಬಹುದು. ಆದರೆ, ಹೀಗೆ ಮಾಡಲು ರಾಷ್ಟ್ರ ಮಟ್ಟದಲ್ಲಿ ಯೋಜನಾ ಅನುಮೋದನಾ ಮಂಡಳಿಯ ಅನುಮತಿ ಪಡೆಯಬೇಕು. ಹಣವನ್ನು ಮಗು ಮತ್ತು ತಾಯಿ ಅಥವಾ ಇತರೆ ಪೋಷಕರು ಅಥವಾ ತಾಯಿ ಇಲ್ಲದಿದ್ದಲ್ಲಿ ಇತರೆ ಪೋಷಕರ ಜಂಟಿ ಖಾತೆಗೆ ಜಮಾ ಮಾಡಬೇಕು. ಜಂಟಿ ಖಾತೆಯನ್ನು ರಾಷ್ಟ್ರೀಯ / ಷೆಡ್ಯೂಲ್ / ಗ್ರಾಮೀಣ ಬ್ಯಾಂಕ / ಅಂಚೆ ಕಚೇರಿಯಲ್ಲಿ ತೆರೆದಿರಬೇಕು. ಇಂತಹ ಸಂದರ್ಭಗಳಲ್ಲಿ ತಂದೆ, ತಾಯಿ ಅಥವಾ ಪೋಷಕರಿಂದ ಹಣ ಸಂದ ರಶೀದಿ ಹಾಗೂ ಉಪಯೋಗಿತಾ ಪ್ರಮಾಣಪತ್ರವನ್ನು ಪಡೆಯಬೇಕು. |
| 10 | ಪಠ್ಯವಿಷಯ ಮತ್ತು ಪಠ್ಯಪುಸ್ತಕ | ಅ) ಎನ್.ಪಿ.ಇ1986/92, ಎನ್.ಸಿ.ಎಫ್–2005 ಹಾಗೂ | ಅ) ಎಲ್ಲಾ ಸರ್ಕಾರಿ / ಸ್ಥಳೀಯ ಸಂಸ್ಥೆ ಮತ್ತು ಖಾಸಗಿ |

| | | | |
|---|---|---|---|
| | | ಆರ್.ಟಿ.ಇ. 2009ರಲ್ಲಿ ಹೇಳಿರುವಂತೆ ಶಿಶುಕೇಂದ್ರಿತ ಪಠ್ಯವಿಷಯ ಹಾಗೂ ಪಠ್ಯಪುಸ್ತಕವನ್ನು ರಾಜ್ಯವು ತಯಾರಿಸಬೇಕು.<br>ಆ) ಪಠ್ಯಪುಸ್ತಕ ಮುದ್ರಣ, ಪರಿಷ್ಕರಣೆ, ವಿನ್ಯಾಸ ರಚನೆ, ಪಠ್ಯ ಮತ್ತು ಕವರ್‌ನ ಅಳತೆ, ಗುಣಮಟ್ಟ, ಇಂಕ್, ಮುದ್ರಣ, ಬೈಂಡಿಂಗ್ ಮುಂತಾದವು ಗುಣಮಟ್ಟಕ್ಕೆ ಸಂಬಂಧಿಸಿದುದಾಗಿದೆ. ಇಂತಹ ವಿಷಯಗಳನ್ನು ನಿರ್ಧರಿಸುವ ಅಧಿಕಾರವನ್ನು ರಾಜ್ಯ ಪಠ್ಯಪುಸ್ತಕ ಸಮಿತಿ ಅಥವಾ ಎಸ್.ಸಿ.ಇ.ಆರ್.ಟಿ.ಗಳಿಗೆ ನೀಡಬೇಕು. ಪಠ್ಯಪುಸ್ತಕ ಪರಿಷ್ಕರಣೆಗಾಗಿ ಸರ್ವ ಶಿಕ್ಷಣ ಅಭಿಯಾನವು ಅನುದಾನ ಸಹಾಯ ನೀಡುತ್ತದೆ. | ಅನುದಾನಿತ ಶಾಲೆಗಳ ಮಕ್ಕಳಿಗೆ ಹಾಗೂ ರಾಜ್ಯ ಪಠ್ಯವಿಷಯ ಬೋಧನೆ ಮಾಡುತ್ತಿರುವ ಮದರಸಾಗಳ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲು ಸರ್ವ ಶಿಕ್ಷಣ ಅಭಿಯಾನವು ಪ್ರತಿ ಮಗುವಿಗೆ ಗರಿಷ್ಠ ರೂ.150/- ರಂತೆ ಕಿರಿಯ ಪ್ರಾಥಮಿಕ ಶಾಲೆಗೆ ಹಾಗೂ ರೂ.250/- ರಂತೆ ಹಿರಿಯ ಪ್ರಾಥಮಿಕ ಶಾಲೆಗೆ ಅನುದಾನ ಸಹಾಯ ಮಾಡುತ್ತದೆ.<br>ಆ) 2007-08ನೇ ಸಾಲಿನಿಂದ ರಾಜ್ಯವಲಯದಡಿ ಮಕ್ಕಳಿಗೆ ಪಠ್ಯಪುಸ್ತಕ ನೀಡುತ್ತಿದ್ದಲ್ಲಿ, ಅದನ್ನು ರಾಜ್ಯವಲಯದಡಿಯಲ್ಲಿಯೇ ಮುಂದುವರಿಸುವುದು.<br>ಇ) ಎನ್.ಸಿ.ಎಫ್-2005ರ ಸಲಹೆಯಂತೆ ಪಠ್ಯಪುಸ್ತಕ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ಮುದ್ರಣ, ಗುಣಮಟ್ಟದ ಮುದ್ರಣದ ಆದ್ಯತೆ ಇವುಗಳನ್ನು ರಾಜ್ಯವು ಕೈಗೊಂಡಲ್ಲಿ ಇದಕ್ಕೆ ಸರ್ವ ಶಿಕ್ಷಣ ಅಭಿಯಾನದಡಿ ಟಾಪ್ ಅಪ್ ಅನುದಾನವನ್ನು ರಾಜ್ಯವಲಯದಡಿ ನೀಡುವ ಪಠ್ಯಪುಸ್ತಕಕ್ಕೂ ನೀಡಲಾಗುವುದು. ಇದಕ್ಕೆ ಅನುದಾನವು ಪ್ರತಿ ಮಗುವಿಗೆ (ಅ)ನಲ್ಲಿ ತಿಳಿಸಿದಂತೆ ಇರುತ್ತದೆ. ಆದರೆ ಇದಕ್ಕೆ ರಾಜ್ಯವು ಪಠ್ಯವಿಷಯ ಪರಿಷ್ಕರಣೆ ಹಾಗೂ ಗುಣಮಟ್ಟ ಪುಸ್ತಕ ಪ್ರಕಟಣೆ ಬಗ್ಗೆ ಆಧಾರವನ್ನು ಪ್ರಸ್ತುತ ಪಡಿಸಬೇಕು.<br>ಈ) ಪ್ರತಿ ಮಗುವಿಗೆ ರೂ.150/-ರ ಮಿತಿಗೊಳಪಟ್ಟು ಗುಡ್ಡಗಾಡು ನಿವಾಸಿಗಳಿಗಾಗಿ (ಟ್ರೈಬಲ್) ಸ್ಥಳೀಯ ಭಾಷೆ ಅಥವಾ ಇಂಗ್ಲೀಷ್ ಭಾಷೆಯನ್ನು ಕಲಿಯಲು ಮುದ್ರಿಸುವ ಪುಸ್ತಕಗಳಿಗೆ ಸಹಾಯ ಅನುದಾನ ನೀಡಲಾಗುತ್ತದೆ.<br>ಉ) ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ |

| | | | |
|---|---|---|---|
| | | | ಪ್ರತಿ ಮಗುವಿಗೆ ಪ್ರತಿವರ್ಷಕ್ಕೆ ಇರುವ ನಿಗದಿತ ಅನುದಾನದಲ್ಲಿ ರಾಜ್ಯವು ಪಠ್ಯವಿಷಯ, ತರಗತಿ ಹಾಗೂ ವರ್ಗಕ್ಕೆ ಅಗತ್ಯವಿರುವ ಪಠ್ಯಪುಸ್ತಕಕ್ಕೆ ಪೂರಕವಾದ ವರ್ಕ್‌ಬುಕ್‌ಗಳನ್ನು ನೀಡಬಹುದು.<br>ಊ) ರಾಜ್ಯ ಸರ್ಕಾರದಿಂದ ಪ್ರಾಥಮಿಕ ಶಾಲೆಗಳ ಮಕ್ಕಳ ಪಠ್ಯಪುಸ್ತಕಕ್ಕಾಗಿ ಅನುದಾನ ಬಿಡುಗಡೆ ಮಾಡುತ್ತಿದ್ದಲ್ಲಿ, ಸರ್ವ ಶಿಕ್ಷಣ ಅಭಿಯಾನದಡಿ ಅನುದಾನ ರಾಜ್ಯ ಸರ್ಕಾರದ ಭಾಗದ ಬಿಡುಗಡೆಯನ್ನು ಕಳೆದು ಒಟ್ಟಾರೆ (ಅ) ನಲ್ಲಿನ ಮಿತಿಗೊಳಪಟ್ಟಂತೆ ಅನುದಾನ ನಿರ್ಧರಿತವಾಗುತ್ತದೆ. |
| 11 | ಕಲಿಕಾ ಅಭಿವೃದ್ಧಿ ಕಾರ್ಯಕ್ರಮ (ಎಲ್.ಇ.ಪಿ) | ಅ) ಎನ್.ಪಿ.ಇ1986/92, ಎನ್.ಸಿ.ಎಫ್–2005 ಹಾಗೂ ಆರ್.ಟಿ.ಇ. 2009ರ ಸೆಕ್ಷನ್ 29ರಲ್ಲಿ ತಿಳಿಸಿರುವಂತೆ ಶಿಶುಕೇಂದ್ರಿತ ಪಠ್ಯಪುಸ್ತಕ ತಯಾರಿಕೆ ಸೇರಿದಂತೆ, ಪಠ್ಯವಿಷಯ ಪರಿಷ್ಕರಣೆ, ಪಠ್ಯಪುಸ್ತಕ ಹಾಗೂ ಪೂರಕ ಪುಸ್ತಕಗಳ ಪ್ರಕಟಣೆಗಾಗಿ ಸರ್ವ ಶಿಕ್ಷಣ ಅಭಿಯಾನದ ಕಲಿಕಾ ಅಭಿವೃದ್ಧಿ ಕಾರ್ಯಕ್ರಮ ಚಟುವಟಿಕೆಯಡಿ ಅನುದಾನ ನೀಡಲಾಗುತ್ತದೆ.<br>ಆ) ಕಲಿಕಾ ಅಭಿವೃದ್ಧಿ ಚಟುವಟಿಕೆಯ ಅನುದಾನವನ್ನು ಮಾಡ್ಯೂಲ್ ಅಭಿವೃದ್ಧಿಗೆ ಮತ್ತು ಬೋಧನಾ ಕಲಿಕಾ ಸಾಮಗ್ರಿಯ ಮಾದರಿಗೆ, ಶಿಕ್ಷಕರ ತರಬೇತಿಗೆ ಮತ್ತು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಬಳಸಬಹುದು.<br>ಇ) ಕಲಿಕಾ ಅಭಿವೃದ್ಧಿ ಚಟುವಟಿಕೆಯನ್ನು ಸಾಮಾನ್ಯ ಪಠ್ಯ ಬೋಧನೆಯೊಂದಿಗೆ ಸಮನ್ವಯಗೊಳಿಸಿ ಪ್ರಕ್ರಿಯೆ ನಡೆಸಬೇಕು. ಇದು ಮಕ್ಕಳಿಗೆ ಹೆಚ್ಚುವರಿ ಕಲಿಕೆಯ ಹೊರೆಯಾಗಬಾರದು. | ಅ) ಕಲಿಕಾ ಅಭಿವೃದ್ಧಿ ಚಟುವಟಿಕೆಗಾಗಿ ಜಿಲ್ಲೆಯ ಮಂಜೂರಾದ ಅನುದಾನದ ಶೇಕಡಾ 2ರಷ್ಟು ಅನುದಾನವನ್ನು ನೀಡಲಾಗುತ್ತದೆ ಹಾಗೂ ಆಡಳಿತಾತ್ಮಕ ವೆಚ್ಚದ ಒಟ್ಟು ಅನುದಾನ 6% ಮಿತಿಯನ್ನು ಮೀರುವಂತಿಲ್ಲ. (ಸಣ್ಣ ಜಿಲ್ಲೆಗೆ ರೂ.40/– ಲಕ್ಷದವರೆಗೆ ಪ್ರತಿ ವರ್ಷಕ್ಕೆ) |

| | | | |
|---|---|---|---|
| | | ಈ) ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಜಿಲ್ಲೆ / ರಾಜ್ಯ ಅಗತ್ಯತೆಯ ಕಲಿಕಾಭಿವೃದ್ಧಿ ಚಟುವಟಿಕೆಗಳನ್ನು ಭಾಷೆ, ವಿಜ್ಞಾನ, ಗಣಿತ, ಪರಿಸರ ಅಧ್ಯಯನ ಮತ್ತು ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬಹುದು. ಈ ರೀತಿ ಮಾಡುವಾಗ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು ಕೆಳಗಿನವುಗಳನ್ನು ಗಮನಿಸಬೇಕು;<br>· ಎನ್.ಸಿ.ಎಫ್-2005ರಲ್ಲಿ ಹೇಳಿರುವ ಶಿಶುಕೇಂದ್ರಿತ ಶಿಕ್ಷಣ ಕ್ಷೇತ್ರದ ಮಾರ್ಗದರ್ಶನವನ್ನು ಅಳವಡಿಸಿಕೊಳ್ಳಬೇಕು.<br>· ಕಲಿಕಾ ಅಭಿವೃದ್ಧಿ ಚಟುವಟಿಕೆಯ ಪರಿಣಾಮವನ್ನು ಸ್ಪಷ್ಟವಾಗಿ ನಮೂದಿಸಬೇಕು.<br>· ಒಟ್ಟು ಮಕ್ಕಳ ಸಂಖ್ಯೆ, ಒಟ್ಟು ಶಾಲೆಗಳ ಸಂಖ್ಯೆಯನ್ನು ತಾಲ್ಲೂಕುವಾರು ನಮೂದಿಸಬೇಕು.<br>· ಮಕ್ಕಳಿಗೆ ಬಳಸುವ ಕಲಿಕಾ ಬೋಧನೋಪಕರಣ / ಶಿಕ್ಷಕರು / ತರಬೇತಿ ನೀಡುವವರ ವಿವರವನ್ನು ನಮೂದಿಸಬೇಕು.<br>· ಕಾರ್ಯಕ್ರಮ ಅನುಷ್ಠಾನದ ರೂವಾರಿಗಳಾದ ಶಿಕ್ಷಕರು, ಸಿ.ಆರ್.ಸಿ, ಬಿ.ಆರ್.ಸಿ, ಡಯಟ್, ಸಮುದಾಯ ಮುಂತಾದವುಗಳನ್ನು ನಮೂದಿಸಬೇಕು.<br>· ಮಧ್ಯವರ್ತನೆಯ ಬಾಹ್ಯಮೌಲ್ಯಮಾಪನವು ಇದರಲ್ಲಿ ಸೇರಿರುತ್ತದೆ.<br>ಪಠ್ಯಪುಸ್ತಕವೂ ಸೇರಿದಂತೆ ಯಾವುದೇ ಚಟುವಟಿಕೆಯಡಿ ಇದರ ಅನುದಾನವು ಪುನರಾವರ್ತನೆಯಾಗುವಂತಿಲ್ಲ. | |
| 12 | ತರಬೇತಿ | ಶಿಕ್ಷಕರಿಗೆ : | (1) ಸರ್ವ ಶಿಕ್ಷಣ ಅಭಿಯಾನವು ಕೆಳಕಂಡ ನಿಯಮಗಳಂತೆ |

| | | | |
|---|---|---|---|
| | | ಅ) ಸರ್ಕಾರಿ, ಸ್ಥಳೀಯ ಸಂಸ್ಥೆಗಳು, ಅನುದಾನಿತ ಶಾಲೆಗಳ ಶಿಕ್ಷಕರು ಹಾಗೂ ರಾಜ್ಯ ಪಠ್ಯವಸ್ತುವನ್ನು ಬೋಧಿಸುತ್ತಿರುವ ಮದರಸಾಗಳ ಶಿಕ್ಷಕರಿಗೆ, ಮಕ್ಕಳ ದೃಷ್ಟಿಯಿಂದ ಹಾಗೂ ಶಿಕ್ಷಕರ ಜ್ಞಾನ ಬೆಳವಣಿಗೆಗಾಗಿ ಹಾಗೂ ಕೌಶಲಗಳ ಅಭಿವೃದ್ಧಿಗಾಗಿ ಸೇವಾನಿರತ ತರಬೇತಿಯನ್ನು ನೀಡಲಾಗುತ್ತದೆ. ಸೇವಾನಿರತ ತರಬೇತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ನೀಡುವ ವಿಶೇಷ ತರಬೇತಿಯೂ ಸೇರಿರುತ್ತದೆ.<br>ಆ) ತರಬೇತಿ ಹೊಂದಿಲ್ಲದ ಶಿಕ್ಷಕರಿಗೆ ವೃತ್ತಿ ಅರ್ಹತೆಯನ್ನು ಗಳಿಸಲು ತರಬೇತಿ.<br>ಇ) ಡಯಟ್‌ಗಳಲ್ಲಿ ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಪೂರ್ವ ಸೇವಾ ಶಿಕ್ಷಕರ ತರಬೇತಿ.<br><br>ಮುಖ್ಯ ಶಿಕ್ಷಕರಿಗೆ :<br>ಈ) ಪ್ರತಿದಿನ ಮಕ್ಕಳ ರಕ್ಷಣೆಯ ದೃಷ್ಟಿಯಿಂದ ಅಗತ್ಯವಾದ ಹೊಸ ಕೌಶಲಗಳನ್ನು ಕಲಿಯಲು ತರಬೇತಿ.<br><br>ಸಂಪನ್ಮೂಲ ಶಿಕ್ಷಕರಿಗೆ :<br>ಉ) ಶಿಶುಕೇಂದ್ರಿತ ಶಿಕ್ಷಣ ಶಾಸ್ತ್ರ ಹಾಗೂ ತರಗತಿ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ತರಬೇತಿ.<br><br>ಶೈಕ್ಷಣಿಕ ಆಡಳಿತಗಾರರಿಗೆ :<br>ಊ) ಪರಿವೀಕ್ಷಕರ ವಿಧಾನದಿಂದ ಉಲ್ಲೇಖಾರ್ಹ ವಿಧಾನದೆಡೆಗೆ ಮುಂದುವರಿಯಲು ತರಬೇತಿ. | ತರಬೇತಿಗೆ ಅನುದಾನ ಸಹಾಯ ನೀಡುತ್ತದೆ;<br>ಶಿಕ್ಷಕರಿಗೆ :<br>ಅ) ಪ್ರತಿ ದಿನ ಪ್ರತಿ ಶಿಕ್ಷಕರಿಗೆ ರೂ.200/- ರಂತೆ ಬ್ಲಾಕ್ ಮಟ್ಟದಲ್ಲಿ 10 ದಿನಗಳ ವಸತಿಯುತ ಪುನರ್‌ಮನನ ಸೇವಾನಿರತ ಶಿಕ್ಷಕರ ತರಬೇತಿ.<br>ಆ) ಪ್ರತಿ ದಿನ ಪ್ರತಿ ಶಿಕ್ಷಕರಿಗೆ ರೂ.100/- ರಂತೆ 10 ತಿಂಗಳಿಗೆ ಕ್ಲಸ್ಟರ್ ಮಟ್ಟದಲ್ಲಿ ಒಂದು ದಿನದ ಮಾಸಿಕ ಕ್ಲಸ್ಟರ್ ಸಭೆ ಹಾಗೂ ಪೀರ್ ಗುಂಪಿನ ಸಭೆ.<br>ಇ) ಪ್ರತಿ ದಿನ ರೂ.200/-ರಂತೆ ಹೊಸ ಶಿಕ್ಷಕರಿಗೆ 30 ದಿನಗಳ ವಸತಿಯುತ ಬುನಾದಿ ತರಬೇತಿ.<br>ಈ) ಪ್ರತಿ ಶಿಕ್ಷಕರಿಗೆ ಪ್ರತಿ ವರ್ಷ ರೂ.6,000/-ದಂತೆ ಎರಡು ವರ್ಷಗಳಿಗೆ ತರಬೇತಿ ಹೊಂದಿಲ್ಲದ ಶಿಕ್ಷಕರಿಗೆ ವೃತ್ತ ತರಬೇತಿ ಹೊಂದಲು ಅನುದಾನ.<br>ಮುಖ್ಯ ಶಿಕ್ಷಕರಿಗೆ :<br>ಅ) ಪ್ರತಿ ದಿನ ಪ್ರತಿ ಶಿಕ್ಷಕರಿಗೆ ರೂ.200/- ರಂತೆ ಬ್ಲಾಕ್ ಮಟ್ಟದಲ್ಲಿ 10 ದಿನಗಳ ವಸತಿಯುತ ಪುನರ್‌ಮನನ ಸೇವಾನಿರತ ಶಿಕ್ಷಕರ ತರಬೇತಿ.<br>ಸಂಪನ್ಮೂಲ ಶಿಕ್ಷಕರಿಗೆ :<br>ಅ) ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ ರೂ.200/-ರಂತೆ ಪ್ರತಿ ವರ್ಷ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು, ಮಾಸ್ಟರ್ ಟ್ರೈನರ್ಸ್, ಬಿ.ಆರ್.ಸಿ. ಸಿ.ಆರ್.ಸಿ ಹಾಗೂ ಕೋ-ಆರ್ಡಿನೇಟರ್‌ಗಳಿಗೆ 10 ದಿನಗಳ ವಸತಿಯುತ ಪುನರ್‌ಮನನ ತರಬೇತಿ.<br>ಶೈಕ್ಷಣಿಕ ಆಡಳಿತಗಾರರಿಗೆ : |

| | | | |
|---|---|---|---|
| | | | ಅ) ಆರ್.ಟಿ.ಇ. ಅನುಷ್ಠಾನಕ್ಕಾಗಿ ತರಬೇತಿ. ಇದಕ್ಕೆ ಅನುದಾನವನ್ನು ಆಡಳಿತಾತ್ಮಕ ವೆಚ್ಚದಡಿ ಬಳಸುವುದು ಮತ್ತು ದರವನ್ನು ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.<br>ಆ) ಯಾವುದೇ ತರಬೇತಿಯಲ್ಲಿ ಒಂದು ಬ್ಯಾಚ್‌ಗೆ 30 ಜನಕ್ಕಿಂತ ಹೆಚ್ಚು ಇರಬಾರದು.<br>ಇ) ಘಟಕ ವೆಚ್ಚದ ಮಿತಿಯನ್ನು ಸ್ವಯಂಚಾಲಿತವಾಗಿ ನಿರ್ಧರಿಸುವಂತಿಲ್ಲ. ಸರಿಯಾದ ಘಟಕ ವೆಚ್ಚದೊಂದಿಗೆ ಕ್ರಿಯಾ ಯೋಜನೆ ತಯಾರಿಸಬೇಕು. ತರಬೇತಿ ದಿನಗಳನ್ನು ರಾಜ್ಯ ಸರ್ಕಾರವು ನಿರ್ಧರಿಸುವುದು. ಸರ್ವ ಶಿಕ್ಷಣ ಅಭಿಯಾನ ರಾಜ್ಯ ಕಾರ್ಯಕಾರಿ ಸಮಿತಿ ಅನುಮೋದಿಸಿದ ಘಟಕ ವೆಚ್ಚದಲ್ಲಿ ತರಬೇತಿ ವಿಷಯ, ತರಬೇತಿ ಸಾಮಗ್ರಿ, ಸಂಪನ್ಮೂಲ ವ್ಯಕ್ತಿ / ಮಾಸ್ಟರ್ ಟ್ರೈನರ್ ಮತ್ತು ಇತರೆ ತರಬೇತಿ ನಿಯಮಗಳನ್ನು ರೂಪಿಸಬೇಕು.<br>ಈ) ಪ್ರಸ್ತುತ ಲಭ್ಯವಿರುವ ಶಿಕ್ಷಕರ ಪ್ರಶಿಕ್ಷಣ ನೀಡುತ್ತಿರುವ ಎಸ್.ಸಿ.ಇ.ಆರ್.ಟಿ / ಡಯಟ್‌ಗಳ ಸಹಾಯವನ್ನು ಪಡೆಯುವುದು. |
| 13 | ಬಿ.ಆರ್.ಸಿ/ಯು.ಆರ್.ಸಿ / ಸಿ.ಆರ್.ಸಿ.ಗಳ ಮೂಲಕ ಶೈಕ್ಷಣಿಕ ಸಲಹೆ | ಅ) ಶಾಲೆಗಳಿಗೆ, ಶಿಕ್ಷಕರಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ನೀಡುವಲ್ಲಿ ಬಿ.ಆರ್.ಸಿ/ಯು.ಆರ್.ಸಿ / ಸಿ.ಆರ್.ಸಿ.ಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಸರ್ವ ಶಿಕ್ಷಣ ಅಭಿಯಾನದಡಿ ರಚಿಸಿರುವ ಸದರಿ ವ್ಯವಸ್ಥೆಯನ್ನು ಬಲಗೊಳಿಸಲು ಸಿಬ್ಬಂದಿ, ಭೌತಿಕ ಸೌಲಭ್ಯಗಳನ್ನು ಬಿ.ಆರ್.ಸಿ / ಸಿ.ಆರ್.ಸಿ.ಗಳಿಗೆ ಒದಗಿಸಲಾಗುತ್ತದೆ. | ಬಿ.ಆರ್.ಸಿ. / ಸಿ.ಆರ್.ಸಿ.ಗಳಿಗೆ ಸರ್ವ ಶಿಕ್ಷಣ ಅಭಿಯಾನದಡಿ ಕೆಳಕಂಡ ನಿಯಮಗಳಂತೆ ಸೌಲಭ್ಯಗಳನ್ನು ನೀಡಲಾಗುವುದು.<br><br>ಬಿ.ಆರ್.ಸಿ / ಯು.ಆರ್.ಸಿ.ಗಳಿಗೆ :<br>ಅ) ಸಾಮಾನ್ಯವಾಗಿ ಒಂದು ಕಂದಾಯ ಬ್ಲಾಕ್‌ಗೆ ಒಂದು ಬಿ.ಆರ್.ಸಿ.ಯನ್ನು ಅನುಮೋದಿಸಲಾಗುವುದು. ರಾಜ್ಯಗಳಲ್ಲಿ ಶೈಕ್ಷಣಿಕ ಬ್ಲಾಕ್‌ಗಳು ಇದ್ದಲ್ಲಿ, ಹಾಗೂ ಇವುಗಳು ಕಂದಾಯ |

| | | | |
|---|---|---|---|
| | | ಆ) ರಾಜ್ಯವು ಬಿ.ಆರ್.ಸಿ / ಸಿ.ಆರ್.ಸಿ.ಗಳಿಗೆ ಕೋ-ಆರ್ಡಿನೇಟರ್ ಮತ್ತು ಸಿಬ್ಬಂದಿಗಳನ್ನು ಆರಿಸಲು ಉತ್ತಮವಾದ ಮಾನದಂಡವನ್ನು ಗುರ್ತಿಸಬೇಕು. ಕೋ-ಆರ್ಡಿನೇಟರ್‌ಗಳನ್ನು ನೇಮಿಸುವಾಗ ಅವರ ಶೈಕ್ಷಣಿಕ ಅನುಭವ, ವಿದ್ಯಾರ್ಹತೆ ತರಬೇತಿ ಮತ್ತು ಸಂಶೋಧನೆಯಲ್ಲಿ ಇರುವ ಯೋಗ್ಯತೆಗಳನ್ನು ಆಧಾರಕ್ಕೆ ತೆಗೆದುಕೊಳ್ಳಬೇಕು.<br>ಇ) ರಾಜ್ಯವು ಬಿ.ಆರ್.ಸಿ. / ಸಿ.ಆರ್.ಸಿ.ಗಳಿಗೆ ನಿರಂತರವಾಗಿ ಕೌಶಲ ಅಭಿವೃದ್ಧಿಗೆ ಅವಕಾಶ ನೀಡಬೇಕು.<br>ಈ) ಬಿ.ಆರ್.ಸಿ. / ಯು.ಆರ್.ಸಿ. ಮತ್ತು ಸಿ.ಆರ್.ಸಿ.ಗಳು ಡಯಟ್ ಮತ್ತು ಜಿಲ್ಲಾ ಹಂತದ ಸಂಪನ್ಮೂಲ ಗುಂಪಗಳೊಡನೆ ಕ್ರಿಯಾತ್ಮಕ ಸಂಬಂಧವನ್ನು ಬಲಗೊಳಿಸಬೇಕು. | ಬ್ಲಾಕ್‌ಗಳಡಿಯಲ್ಲಿ ಇರದಿದ್ದಲ್ಲಿ, ರಾಜ್ಯವು ಅಲ್ಲಿಯೂ ಬಿ.ಆರ್.ಸಿ.ಯನ್ನು ನೀಡಬಹುದು. ಆದರೆ, ಒಂದು ಬಿ.ಆರ್.ಸಿ.ಗೆ ಅನುಮೋದಿಸುವ ವೆಚ್ಚವು ಸಿ.ಡಿ.ಬ್ಲಾಕ್‌ಗೆ (ಶೈಕ್ಷಣಿಕ ಮತ್ತು ಕಂದಾಯ ಬ್ಲಾಕ್‌ಗಳೂ ಸೇರಿ) ಅನುಮೋದಿತ ವೆಚ್ಚಕ್ಕಿಂತ ಹೆಚ್ಚಾಗುವಂತಿಲ್ಲ.<br>ಆ) ನಗರ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರವನ್ನು ಬಿ.ಆರ್.ಸಿ.ಗಳಲ್ಲಿಯೇ ಸ್ಥಾಪಿಸಿ, ಇದು ಸುಮಾರು 10-15 ಸಿ.ಆರ್.ಸಿ.ಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ಮುನಿಸಿಪಾಲಿಟಿ ಅಥವಾ ನಗರ ಅಭಿವೃದ್ಧಿ ಕಚೇರಿಗಳಲ್ಲಿ ಇರುವ ಶೈಕ್ಷಣಿಕ ಸಿಬ್ಬಂದಿಗಳನ್ನು ಯು.ಆರ್.ಸಿ.ಗಳಿಗೆ ನಿಯೋಜಿಸಬಹುದು.<br>ಇ) ಬಿ.ಆರ್.ಸಿ. /ಯು.ಆರ್.ಸಿ.ಗಳಿಗೆ ಕೆಳಕಂಡ ಸಂಪನ್ಮೂಲ ಗುಂಪುಗಳನ್ನು ಒದಗಿಸಬೇಕು.<br>· ನಿಗದಿತ ವಿಷಯ ಬೋಧಿಸುವ 6 ಸಂಪನ್ಮೂಲ ವ್ಯಕ್ತಿಗಳು.<br>· ವಿಶೇಷ ಅಗವತ್ಯವುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಇಬ್ಬರು ಸಂಪನ್ಮೂಲ ವ್ಯಕ್ತಿಗಳು.<br>· ಒಂದು ಎಂ.ಐ.ಎಸ್. ಕೋ-ಆರ್ಡಿನೇಟರ್ ಹಾಗೂ ಒಂದು ಡೇಟಾ ಎಂಟ್ರಿ ಆಪರೇಟರ್<br>· ಗುತ್ತಿಗೆ ಆಧಾರದ ಮೇಲೆ 50 ಶಾಲೆಗಳಿಗೆ ಒಬ್ಬರು ಲೆಕ್ಕಸಹಾಯಕರ ನೇಮಕ. ಈ ಲೆಕ್ಕಸಹಾಯಕರು ಶಾಲೆಗಳಿಗೆ ಭೇಟಿ ನೀಡಿ, ಶಾಲೆಗಳಲ್ಲಿ ಮತ್ತು ಬ್ಲಾಕ್‌ಗಳಲ್ಲಿ ಲೆಕ್ಕದ ರೆಕಾರ್ಡ್‌ಗಳನ್ನು ನಿರ್ವಹಿಸಲು ಸಹಾಯ ಮಾಡಬೇಕು. |

| | | | |
|---|---|---|---|
| | | | ಈ) ಬಿ.ಆರ್.ಸಿ. / ಯು.ಆರ್.ಸಿ. ಕೋ-ಆರ್ಡಿನೇಟರ್‌ಗಳು ವೃತ್ತಿಪರ ವಿದ್ಯಾರ್ಹತೆಯನ್ನು ಹೊಂದಿದ್ದು, ಬೋಧನೆಯಲ್ಲಿ 5 ವರ್ಷಗಳ ಪ್ರತ್ಯಕ್ಷ ಅನುಭವವನ್ನು ಪಡೆದಿರಬೇಕು.<br>ಉ) ಸಾಧ್ಯವಾದಷ್ಟು ಬಿ.ಆರ್.ಸಿ. ಕೇಂದ್ರಗಳನ್ನು ಶಾಲಾ ಆವರಣದಲ್ಲಿಯೇ ಸ್ಥಾಪಿಸಬೇಕು. ಕಾರ್ಯಯೋಜನೆ ದರಪಟ್ಟಿಯನ್ವಯ ಕಟ್ಟಡ ಕಾಮಗಾರಿ ನಡೆಯುವುದು.<br>ಊ) ಒಟ್ಟು ಸಿವಿಲ್ ಕಾಮಗಾರಿಗಳ ಮಿತಿಗೊಳಪಟ್ಟು ರೂ.5/- ಲಕ್ಷಗಳನ್ನು ಬಿ.ಆರ್.ಸಿ.ಗಳ ದುರಸ್ತಿಗಾಗಿ (ಆಗ್ಯೂಮೆಂಟಿಂಗ್) ಒಂದು ಸಲದ ಅನುದಾನವನ್ನು ನೀಡಲಾಗುವುದು.<br>ಋ) ಬಿ.ಆರ್.ಸಿ. / ಯು.ಆರ್.ಸಿ.ಗೆ ಪೂರ್ವಸಿದ್ಧತೆ ;<br>· ಹೊಸ ಬಿ.ಆರ್.ಸಿ/ಯು.ಆರ್.ಸಿ.ಗೆ ಪೀಠೋಪಕರಣ, ಕಂಪ್ಯೂಟರ್ ಹಾಗೂ ಟಿ.ಎಲ್.ಇ. ಅನುದಾನವಾಗಿ ರೂ.1,00,000/-ಗಳು.<br>· ಐದು ವರ್ಷಗಳಿಗೊಮ್ಮೆ ಪೀಠೋಪಕರಣ, ಕಂಪ್ಯೂಟರ್ ಹಾಗೂ ಟಿ.ಎಲ್.ಇ.ಗಳನ್ನು ಬದಲಿಸಲು ರೂ.1,00,000/-ಗಳು.<br>· ಪ್ರತಿ ಬಿ.ಆರ್.ಸಿ./ಯು.ಆರ್.ಸಿ.ಗೆ ರೂ.50,000/- ಸಾದಿಲ್ವಾರು ವೆಚ್ಚ.<br>· ಪ್ರತಿ ತಿಂಗಳು ಪ್ರತಿ ಬಿ.ಆರ್.ಸಿ/ಯು.ಆರ್.ಸಿ.ಗೆ ರೂ.2,500/- ಸಭೆಗಳು ಮತ್ತು ಪ್ರವಾಸ ಭತ್ಯೆಗಾಗಿ.<br>· ಪ್ರತಿ ವರ್ಷ ಪ್ರತಿ ಬಿ.ಆರ್.ಸಿ.ಗೆ ಟಿ.ಎಲ್.ಎಂ. ಅನುದಾನ ರೂ.10,000/-<br>· ಪ್ರತಿ ವರ್ಷ ಪ್ರತಿ ಬಿ.ಆರ್.ಸಿ.ಗೆ ರೂ.10,000/- ನಿರ್ವಹಣಾ ಅನುದಾನ. |

| | | | |
|---|---|---|---|
| | | | ಬಿ.ಆರ್.ಸಿ / ಯು.ಆರ್.ಸಿ.ಗಳಿಗೆ :<br>ಅ) ಸರಾಸರಿ 18 ಶಾಲೆಗಳಿಗೆ ಒಬ್ಬರು ಸಿ.ಆರ್.ಸಿ. ಕೋ-ಆರ್ಡಿನೇಟರ್ ನೇಮಿಸಬೇಕು.<br>ಆ) ಸಿ.ಆರ್.ಸಿ. ಕಟ್ಟಡ ನಿರ್ಮಾಣಕ್ಕಾಗಿ ರಾಜ್ಯವು ಹೆಚ್ಚುವರಿ ಕೊಠಡಿಗೆ ನಿಗದಿಪಡಿಸಿರುವ ಅನುದಾನವೇ ನಿಗದಿಯಾಗುತ್ತದೆ. ಸಿ.ಆರ್.ಸಿ. ಕೊಠಡಿಯನ್ನು ಸಭೆಗಳು ಇಲ್ಲದ ಸಮಯದಲ್ಲಿ ಶಾಲೆಯ ಹೆಚ್ಚುವರಿ ಕೊಠಡಿಯಾಗಿ ಉಪಯೋಗಿಸುವುದು.<br>ಇ) ಬಿ.ಆರ್.ಸಿ. / ಯು.ಆರ್.ಸಿ.ಗೆ ಪೂರ್ವಸಿದ್ಧತೆ ;<br>· ಹೊಸ ಸಿ.ಆರ್.ಸಿ.ಗೆ ಪೀಠೋಪಕರಣ, ಕಂಪ್ಯೂಟರ್ ಹಾಗೂ ಟಿ.ಎಲ್.ಇ. ಅನುದಾನವಾಗಿ ರೂ.10,000/-ಗಳು.<br>· ಐದು ವರ್ಷಗಳಿಗೊಮ್ಮೆ ಪೀಠೋಪಕರಣ, ಕಂಪ್ಯೂಟರ್ ಹಾಗೂ ಟಿ.ಎಲ್.ಇ.ಗಳನ್ನು ಬದಲಿಸಲು ರೂ.10,000/-ಗಳು.<br>· ಪ್ರತಿ ಬಿ.ಆರ್.ಸಿ./ಯು.ಆರ್.ಸಿ.ಗೆ ರೂ.10,000/- ಪ್ರತಿ ವರ್ಷ ಸಾದಿಲ್ವಾರು ವೆಚ್ಚ.<br>· ಪ್ರತಿ ತಿಂಗಳು ಪ್ರತಿ ಬಿ.ಆರ್.ಸಿ/ಯು.ಆರ್.ಸಿ.ಗೆ ರೂ.1,000/- ಸಭೆಗಳು ಮತ್ತು ಪ್ರವಾಸ ಭತ್ಯೆಗಾಗಿ.<br>· ಪ್ರತಿ ವರ್ಷ ಪ್ರತಿ ಬಿ.ಆರ್.ಸಿ.ಗೆ ಟಿ.ಎಲ್.ಎಂ. ಅನುದಾನ ರೂ.3,000/-<br>· ಪ್ರತಿ ವರ್ಷ ಪ್ರತಿ ಬಿ.ಆರ್.ಸಿ.ಗೆ ರೂ.2,000/- ನಿರ್ವಹಣಾ ಅನುದಾನ. |
| 14 | ಹೊಸ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ | ಅ) ಆರ್.ಟಿ.ಇ. ಕಾಯಿದೆ ಸೆಕ್ಷನ್ 19ರ ನಿಯಮದನ್ವಯ ಪ್ರತಿ ತರಗತಿಗೆ ಅಗತ್ಯವಿರುವ ಕಲಿಕಾ ಬೋಧನೋಪಕರಣಗಳನ್ನು | ಅ)ಕಲಿಕಾ ಬೋಧನೋಪಕರಣಗಳಿಗಾಗಿ :<br>· ಎಲ್ಲಾ ರಾಜ್ಯಗಳಲ್ಲಿ ಹೊಸ ಕಿರಿಯ ಪ್ರಾಥಮಿಕ |

| | | | |
|---|---|---|---|
| | ಕಲಿಕಾ ಬೋಧನೋಪಕರಣಗಳು | ನೀಡಬೇಕು.<br>ಆ) ಶಾಲಾ ಆಡಳಿತ ಮಂಡಳಿ ಮತ್ತು/ಅಥವಾ ಶಿಕ್ಷಕರು ನಿರ್ಧರಿಸುವ ಸ್ಥಳೀಯ ಮತ್ತು ಸಾಂದರ್ಭಿಕ ಪಠ್ಯಕ್ಕನುಗುಣವಾಗಿ ಬೋಧನೋಪಕರಣಗಳನ್ನು ನೀಡಬೇಕು. ರಾಜ್ಯವು ಶಾಲೆಯ ಅಗತ್ಯತೆ ಮತ್ತು ಪಠ್ಯವಸ್ತುವಿಗೆ ತಕ್ಕಂತೆ ಅಗತ್ಯವಿರುವ ಕಲಿಕಾ ಬೋಧನೋಪಕರಣಗಳ ನಿಶ್ಚಯಾರ್ಥಕ ಪಟ್ಟಿಯನ್ನು ತಯಾರಿಸಿ, ಸರ್ವ ಶಿಕ್ಷಣ ಅಭಿಯಾನ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಯೊಂದಿಗೆ ಶಾಲೆಗಳಿಗೆ ಪಟ್ಟಿ ನೀಡಬಹುದು.<br>ಇ)ಕಲಿಕಾ ಬೋಧನೋಪಕರಣಗಳ ಖರೀದಿ ಪ್ರಕ್ರಿಯೆಯು ಶಿಕ್ಷಕರು ಮತ್ತು ಪೋಷಕರನ್ನು ಒಳಗೊಂಡಿರಬೇಕು.<br>ಈ) ಖರೀದಿ ಪ್ರಕ್ರಿಯೆಯ ವಿಧಾನವನ್ನು ನಿರ್ಧರಿಸಲು ಶಾಲೆ-ಹಳ್ಳಿ, ವಿ.ಇ.ಸಿ/ಎಸ್.ಡಿ.ಎಂ.ಸಿ. ಮಟ್ಟದಲ್ಲಿ ಸಮಿತಿ ರಚಿಸುವುದು. | ಶಾಲೆಗಳಿಗೆ ರೂ.20,000/-<br>· ಎಲ್ಲಾ ರಾಜ್ಯಗಳಲ್ಲಿ ಹೊಸ ಹಿರಿಯ ಪ್ರಾಥಮಿಕ ಶಾಲೆಗಳಿಗೆ ರೂ.50,000/-<br>· ರಾಜ್ಯವು 1-7ನೇ ತರಗತಿಯ ಆವರ್ತದಿಂದ 1-8ನೇ ತರಗತಿಯ ಆವರ್ತಕ್ಕೆ ಮುಂದುವರಿಯಲು ಉನ್ನತೀಕರಣಗೊಳಿಸಿದ 5ನೇ ತರಗತಿಗೆ ರೂ.5000/- ಹಾಗೂ ಉನ್ನತೀಕರಣಗೊಳಿಸಿದ 8ನೇ ತರಗತಿಗೆ ರಊ.15,000/- ನೀಡುವುದು.<br>ಆ) ಟಿ.ಎಲ್.ಎಂ. ಖರೀದಿಗಾಗಿ ಕ್ಲಸ್ಟರ್ / ಬ್ಲಾಕ್ / ಜಿಲ್ಲೆ / ರಾಜ್ಯಮಟ್ಟದಲ್ಲಿ ಅನುದಾನವನ್ನು ಕ್ರೋಢೀಕರಿಸುವಂತಿಲ್ಲ. ಖರೀದಿಯು ಶಾಲಾ ಹಂತದಲ್ಲಿಯೇ ನಡೆಯಬೇಕು. |
| 15 | ಶಿಕ್ಷಕರ ಅನುದಾನ | ಅ) ಶಿಶುಕೇಂದ್ರಿತ, ಸಂತೋಷದಾಯಕ ತರಗತಿಗಾಗಿ, ಸ್ವಂತ ಅಭಿವೃದ್ಧಿ ಪಡಿಸಿರುವ, ಸ್ಥಳೀಯ ವಸ್ತುಗಳನ್ನು ಬಳಸಿ, ಕಡಿಮೆ ವೆಚ್ಚದ ಕಲಿಕಾ ಬೋಧನೋಪಕರಣಗಳ ತಯಾರಿಕೆಗಾಗಿ ಎಲ್ಲಾ ಶಿಕ್ಷಕರಿಗೆ ಪ್ರತಿವರ್ಷ ಶಿಕ್ಷಕರ ಅನುದಾನವನ್ನು ನೀಡಲಾಗುತ್ತದೆ. ಈ ಸೌಲಭ್ಯವು ರಾಜ್ಯ ಮದರಸಾ ಬೋರ್ಡ್‌ಗಳ ಅಧಿಕಾರಕ್ಕೊಳಪಟ್ಟ ಶಾಲೆಯ ಶಿಕ್ಷಕರಿಗೂ ಲಭ್ಯವಾಗುತ್ತದೆ. | ಅ) ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಪ್ರತಿ ಶಿಕ್ಷಕರಿಗೆ ಪ್ರತಿ ವರ್ಷಕ್ಕೆ ರೂ.500/-ಗಳ ಶಿಕ್ಷಕರ ಅನುದಾನ.<br>ಆ) ಕಡಿಮೆ ವೆಚ್ಚದ ಕಲಿಕಾ ಬೋಧನೋಪಕರಣಗಳ ವೆಚ್ಚದಲ್ಲಿ ಪಾರದರ್ಶಕತೆ ಇರಬೇಕು. |
| 16 | ಶಾಲಾನುದಾನ | ಅ) ಹಾಳಾಗಿರುವ ಶಾಲಾ ಸಾಮಗ್ರಿಗಳ ಬದಲಾವಣೆ ಹಾಗೂ ಇನ್ನಿತರ ಆಟ ಸಾಮಗ್ರಿಗಳು, ಬಳಕೆಯ ವಸ್ತುಗಳು, ಆಟ, | ಸರ್ವ ಶಿಕ್ಷಣ ಅಭಿಯಾನವು ಕೆಳಕಂಡ ನಿಯಮಗಳಂತೆ ಶಾಲಾ ಅನುದಾನವನ್ನು ಮಂಜೂರು ಮಾಡುತ್ತದೆ; |

| | | | |
|---|---|---|---|
| | | ಕ್ರೀಡಾ ಸಾಮಗ್ರಿಗಳು ಮುಂತಾದ ಆವರ್ತಕ ವೆಚ್ಚಗಳಿಗಾಗಿ ಪ್ರತಿ ವರ್ಷ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಶಾಲಾ ಅನುದಾನವನ್ನು ನೀಡಲಾಗುತ್ತದೆ. ಸದರಿ ಅನುದಾನವು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಹಾಗೂ ಕಂಪ್ಯೂಟರ್ ಕಲಿಕೆಯ ಅಗತ್ಯತೆಗಳನ್ನು ಒಳಗೊಂಡಿರುತ್ತದೆ. ಈ ಸೌಲಭ್ಯವು ರಾಜ್ಯ ಮದರಸಾ ಬೋರ್ಡ್‌ಗಳ ಅಧಿಕಾರಕ್ಕೊಳಪಟ್ಟ ಶಾಲೆಗಳಿಗೂ ಲಭ್ಯವಾಗುತ್ತದೆ. | ಅ) ಪ್ರತಿ ವರ್ಷ ಪ್ರತಿ ಕಿರಿಯ ಪ್ರಾಥಮಿಕ ಶಾಲೆಗೆ ರೂ.5,000/- ಹಾಗೂ ಪ್ರತಿ ಹಿರಿಯ ಪ್ರಾಥಮಿಕ ಶಾಲೆಗೆ ರೂ.7,000/-ಗಳು.<br>ಆ) ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಒಂದೇ ಸ್ಥಳದಲ್ಲಿದ್ದರೂ, ಶಾಲಾನುದಾನಕ್ಕಾಗಿ ಇದನ್ನು ಎರಡು ಯುನಿಟ್‌ಗಳಾಗಿ ಪರಿಗಣಿಸಬೇಕು.<br>ಇ)ಅನುದಾನದ ಬಳಕೆಯಲ್ಲಿ ಪಾರದರ್ಶಕತೆಯಿರಬೇಕು.<br>ಈ) ಇದನ್ನು ಎಸ್.ಡಿ.ಎಂ.ಸಿ.ಮೂಲಕ ಮಾತ್ರ ಬಳಕೆ ಮಾಡಬೇಕು. |
| 17 | ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ | ಅ) ಆರ್.ಟಿ.ಇ. ಕಾಯಿದೆಗೆ ಸಿದ್ಧಪಡಿಸಲು ಆರ್.ಇ.ಎಂ.ಎಸ್. ಚಟುವಟಿಕೆಗಳನ್ನು ಖಾಸಗಿ ಅನುದಾನರಹಿತ ಶಾಲೆಗಳಿಗೂ ವಿಸ್ತರಿಸಲಾಗಿದೆ.<br>ಆ) ಆರ್.ಇ.ಎಂ.ಎಸ್. ಅನುದಾನವನ್ನು ಕೆಳಕಂಡ ಚಟುವಟಿಕೆಗಳಿಗೆ ಬಳಸಬಹುದು;<br>· ಆರ್.ಟಿ.ಇ. ಕಾಯಿದೆಯನ್ವಯ ಮಕ್ಕಳ ಹಕ್ಕುಗಳ ರಕ್ಷಣೆಯ ಉಸ್ತುವಾರಿಗಾಗಿ ಎನ್.ಸಿ.ಪಿ.ಸಿ.ಆರ್/ಕೆ.ಎಸ್.ಸಿಪಿ.ಸಿ.ಆರ್ / ಆರ್.ಇ.ಪಿ.ಎ ಸಂಸ್ಥೆಗಳ ಸಹಾಯಕ್ಕಾಗಿ.<br>· ಸರ್ವ ಶಿಕ್ಷಣ ಅಭಿಯಾನದಡಿ ನಿಯತವಾದ ಉಸ್ತುವಾರಿಗಾಗಿ.<br>· ಆವಿಷ್ಕೃತ, ಸಂಶೋದನೆ, ಕೇಸ್ ಸ್ಟಡಿ, ದಾಖಲೀಕರಣ ಮತ್ತು ವ್ಯಕ್ತಿತ್ವ ನಿರ್ಮಾಣದಂತಹ ಯೋಜನಾ ತಯಾರಿಕಾ ಚಟುವಟಿಕೆಗಳ ತಾಂತ್ರಿಕ ಸಹಾಯಕ್ಕಾಗಿ.<br>· ಸಮಗ್ರ ಚೈಲ್ಡ್ ಟ್ರಾಕಿಂಗ್ ಸಿಸ್ಟಂಗಾಗಿ. | ಕೆಳಕಂಡ ನಿಯಮಗಳಂತೆ ಸರ್ವ ಶಿಕ್ಷಣ ಅಭಿಯಾನವು ಆರ್.ಇ.ಎಂ.ಎಸ್. ಅನುದಾನ ನೀಡುತ್ತದೆ;<br>ಅ) ಪ್ರತಿ ಶಾಲೆಗೆ ಪ್ರತಿ ವರ್ಷ ರೂ.2000/-ದವರೆಗೆ, ಇದರಲ್ಲಿ ರೂ.500/-ಗಳನ್ನು ರಾಷ್ಟ್ರಮಟ್ಟದಲ್ಲಿ ಬಳಸುವುದು.<br>ಆ) ಆರ್.ಟಿ.ಇ. ಕಾಯಿದೆ 2009ರನ್ವಯ ರಾಷ್ಟ್ರಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರೂ.50/-ನ್ನು ಎನ್.ಸಿ.ಪಿ.ಸಿ.ಆರ್.ಬಳಸುವುದು.<br>ಇ) ಆರ್.ಟಿ.ಇ. ಕಾಯಿದೆ 2009ರನ್ವಯ ರಾಜ್ಯಮಟ್ಟದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರೂ.50/-ನ್ನು ಕೆ.ಎಸ್.ಸಿ.ಪಿ.ಸಿ.ಆರ್.ಗೆ ನೀಡುವುದು.<br>ಈ) ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಒಂದೇ ಸ್ಥಳದಲ್ಲಿದ್ದರೂ, ಆರ್.ಇ.ಎಂ.ಎಸ್. ಚಟುವಟಿಕೆಗಳಿಗೆ ಇದನ್ನು ಪ್ರತ್ಯೇಕವಾಗಿ ಎರಡು ಯೂನಿಟ್ ಎಂದು ಪರಿಗಣಿಸಬೇಕು.<br>ಉ) ಪ್ರತಿ ಶಾಲೆಯ ಒಟ್ಟು ಕ್ರೋಢೀಕೃತ ಅನುದಾನವನ್ನು |

| | | | |
|---|---|---|---|
| | | ·	ಸೋಷಿಯಲ್ ಮ್ಯಾಪಿಂಗ್‌ಗಾಗಿ.<br><br>ಇ) ರಾಷ್ಟ್ರಮಟ್ಟದಲ್ಲಿ – ಆರ್.ಇ.ಎಂ.ಎಸ್. ಅನುದಾನವನ್ನು;<br>1.	ಆರು ತಿಂಗಳಿಗೊಮ್ಮೆ ಜೆ.ಆರ್.ಎಂ. ಸಭೆಗಳನ್ನು ನಡೆಸಲು,<br>2.	ಸಂಶೋಧನೆ ಮತ್ತು ಮೌಲ್ಯಮಾಪನ ಸ್ಟಡಿಗಳು, ರಾಷ್ಟ್ರಮಟ್ಟದ ಸ್ಯಾಂಪಲ್ ಸರ್ವೆ, ಕೋಹರ್ಟ್ ಸ್ಟಡಿ, ಮೂರನೇ ವ್ಯಕ್ತಿ ಮೌಲ್ಯಮಾಪನ ಮುಂತಾದುವುಗಳಿಗೆ,<br>3.	ಎಂ.ಐ.ಎಸ್. ಅಭಿವೃದ್ಧಿಗೆ, ಪ್ರಕಟಣೆ ಮತ್ತು ಡೈಸ್ ಡೇಟಾ ಡಿಸ್ಸೆಮಿನೇಷನ್‌ಗಾಗಿ.<br>4.	ಒಳ್ಳೆಯ ತರಗತಿ ಅಭ್ಯಾಸಗಳ ದಾಖಲೀಕರಣಕ್ಕೆ ಹಾಗೂ ಹಂಚಿಕೆಗೆ.<br>5.	ಕಾರ್ಯಕ್ರಮಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಿಗೆ.<br>6.	ರಾಷ್ಟ್ರಮಟ್ಟದ ಉಸ್ತುವಾರಿ ಸಂಸ್ಥೆಗಳ ಮೂಲಕ ಸ್ವತಂತ್ರ ಕ್ಷೇತ್ರ ಭೇಟಿಯ ಪರಿಶೀಲನೆ ಮತ್ತು ಉಸ್ತುವಾರಿಗೆ.<br>7.	ಸ್ವತಂತ್ರ ಸಂಸ್ಥೆಗಳಿಂದ ಒಟ್ಟಾದ ಆರ್ಥಿಕ ಪ್ರಗತಿ ಪರಿಶೀಲನೆಗೆ,<br>8.	ಪರಿಣಾಮಕಾರಿಯಾದ ಕ್ಷೇತ್ರ ಆಧಾರಿತ ಉಸ್ತುವಾರಿಗಾಗಿ ರಾಷ್ಟ್ರ / ರಾಜ್ಯ / ಜಿಲ್ಲೆ / ತಾಲ್ಲೂಕು ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳ ಗುಂಪು ಸೃಷ್ಟಿಗಾಗಿ,<br>9.	ರಾಜ್ಯ ಮತ್ತು ಜಿಲ್ಲೆಗಳಲ್ಲಿ ವ್ಯಕ್ತಿತ್ವ ಬಲವರ್ಧನೆಗಾಗಿ.<br>10.	ಅಸೆಸ್‌ಮೆಂಟ್ ಹಾಗೂ ಅಪ್ರೈಸಲ್ ಗುಂಪುಗಳು | ರಾಷ್ಟ್ರ / ರಾಜ್ಯ / ಜಿಲ್ಲೆ / ತಾಲ್ಲುಕು / ಶಾಲೆ ಮಟ್ಟಗಳಲ್ಲಿ ಬಳಸಬೇಕು.<br>ಊ)ರಾಜ್ಯ / ಜಿಲ್ಲೆ / ಬಿ.ಆರ್.ಸಿ / ಸಿ,ಆರ್.ಸಿ ಮಟ್ಟಗಳಲ್ಲಿ ಆರ್.ಇ.ಎಂ.ಎಸ್. ಅನುದಾನವನ್ನು ಬಳಸುವ ಬಗ್ಗೆ ರಾಜ್ಯ ಸರ್ವ ಶಿಕ್ಷಣ ಅಭಿಯಾನ ಕಾರ್ಯಕಾರಿ ಸಮಿತಿಯು ನಿಯಮಗಳನ್ನು ರೂಪಿಸಬೇಕು. |

| | | | |
|---|---|---|---|
| | | ಮತ್ತು ಅವುಗಳ ಕ್ಷೇತ್ರ ಭೇಟಿ ಚಟುವಟಿಕೆಗಳು.<br>11. ಉಸ್ತುವಾರಿ ಮಾಡುವ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರವಾಸ ಭತ್ಯೆ ಮತ್ತು ಸಾಮಾನ್ಯ ಗೌರವಧನ (ರಾಜ್ಯ ನಿಯಮದಂತೆ)<br>12. ದೃಶ್ಯ ಉಸ್ತುವಾರಿ ಸಿಸ್ಟಂಗಾಗಿ ಚಾರ್ಟ್, ಪೋಸ್ಟರ್, ಸ್ಕೆಚ್ ಪೆನ್, ಓ.ಹೆಚ್.ಪಿ. ಪೆನ್ ಇತ್ಯಾದಿಗಾಗಿ ಸಾದಿಲ್ವಾರು ವೆಚ್ಚ<br>13. ರಾಜ್ಯವು ಕೆಳಕಂಡ ಚಟುವಟಿಕೆಗಳಿಗೆ ಮೊದಲ ಆದ್ಯತೆ ನೀಡಬೇಕು;<br>1. ಶಾಲಾ ಉಸ್ತುವಾರಿ ವ್ಯವಸ್ಥೆ ಅಭಿವೃದ್ಧಿ<br>2. ಸಂಶೋಧನೆ ಮತ್ತು ಸಮೀಕ್ಷೆಗಳ ವಿಷಯ;<br>3 ಕಲಿಕಾ ಪರಿಣಾಮ<br>4 ಶಿಕ್ಷಕರ ಪ್ರಗತಿ<br>5 ವಿದ್ಯಾರ್ಥಿ ಮತ್ತು ಶಿಕ್ಷಕರ ಹಾಜರಾತಿ<br>6 ತರಗತಿ ಬೋಧನೆಯಲ್ಲಿ ಗುರ್ತಿಸಬಹುದಾದ ಬದಲಾವಣೆಗಳು.<br>7 ಶಿಕ್ಷಕರ ತರಬೇತಿಯ ಪರಿಣಾಮ<br>8 ಓದುವ ವಿಷಯಗಳು ಮತ್ತು ಪಠ್ಯಪುಸ್ತಕದ ಫಲಪ್ರದತೆ<br>9 ಬಿ.ಆರ್.ಸಿ. / ಸಿ.ಆರ್.ಸಿ / ಡಯಟ್‌ಗಳಿಂದ ದೊರೆಯುವ ಶೈಕ್ಷಣಿಕ ಮಾರ್ಗದರ್ಶನ ಗುಣಮಟ್ಟ.<br>10 ಸಂಶೋಧನೆ ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ಅನುಮೋದಿಸಲು ಪ್ರತಿ ರಾಜ್ಯವು | |

| | | | |
|---|---|---|---|
| | | ಸಂಶೋಧನಾ ಅನುಮೋದನಾ ಸಮಿತಿಯನ್ನು ರಚಿಸಬೇಕು. ಜಿಲ್ಲಾ ಮಟ್ಟಕ್ಕಾಗಿ ಒಪ್ಪಿಕೊಳ್ಳುವ ಉತ್ತಮ ವಿನ್ಯಾಸವನ್ನು ಸಿದ್ಧಪಡಿಸಬೇಕು.<br>11 ರಾಜ್ಯ ಮತ್ತು ಜಿಲ್ಲಾ ಅನುದಾನದಲ್ಲಿ ಇ.ಎಂ.ಐ.ಎಸ್., ಶಾಲಾ ಮ್ಯಾಪಿಂಗ್, ಮೈಕ್ರೋ ಪ್ಲಾನಿಂಗ್, ಮನೆ ಮನೆ ಸಮೀಕ್ಷೆ ಮುಂತಾದ ಚಟುವಟಿಕೆಗಳಿಗೆ ಅನುದಾನ ಇರುತ್ತದೆ. | |
| 18 | ಆವಿಷ್ಕೃತ ಕಂಪ್ಯೂಟರ್ ಆಧಾರಿತ ಶಿಕ್ಷಣಕ್ಕಾಗಿ ಅನುದಾನ | ಅ) ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯವಾಗಿ ವಿಜ್ಞಾನ ಮತ್ತು ಗಣಿತ ವಿಷಯಕ್ಕಾಗಿ ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ಹೆಚ್ಚಾಗಿ ಬಳಸಲು ಆವಿಷ್ಕೃತವಾಗಿ ಅನುದಾನವನ್ನು ನೀಡಲಾಗಿದೆ. ಅಗತ್ಯವಿದ್ದಲ್ಲಿ ಇದರಲ್ಲಿ ಹಾರ್ಡ್‌ವೇರ್, ಸಾಫ್ಟ್‌ವೇರ್, ತರಬೇತಿ, ನಿರ್ವಹಣೆ ಮತ್ತು ಸಂಪನ್ಮೂಲ ಸಹಾಯ ಚಟುವಟಿಕೆಗಳನ್ನು ಮಾಡಬಹುದಾಗಿದೆ. | ಅ) ಪ್ರತಿ ಜಿಲ್ಲೆಗೆ ಪ್ರತಿ ವರ್ಷಕ್ಕೆ ರೂ.50.00 ಲಕ್ಷಗಳು. |
| 19 | ಗ್ರಂಥಾಲಯ | ಅ) ಶಾಲೆಗಳಲ್ಲಿ ಗ್ರಂಥಾಲಯವನ್ನು ಸ್ಥಾಪಿಸಲು ಪುಸ್ತಕಗಳ ಸಹಿತ ಭೌತಿಕ ಸೌಲಭ್ಯ ನೀಡಬಹುದು.<br>1. ಗ್ರಂಥಾಲಯ ಇಲ್ಲದಿರುವ ಪ್ರಸ್ತುತದಲ್ಲಿರುವ ಸರ್ಕಾರಿ ಶಾಲೆಗಳಿಗೆ ಅನುದಾನ.<br>2. ಹೊಸ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಟಿ.ಎಲ್.ಇ. ಅನುದಾನ ಪಡೆಯುವುದರಿಂದ ಈ ಅನುದಾನ ಪಡೆಯುವಂತಿಲ್ಲ.<br>3. ಪೀಟೋಪಕರಣ ಮತ್ತು ಪುಸ್ತಕಗಳನ್ನು ಎಸ್.ಡಿ.ಎಂ.ಸಿ. ಅಥವಾ ಸಮಾನದ ಶಾಲೆಯ ಸಮಿತಿಯಿಂದ | ಅ) ಕಿರಿಯ ಪ್ರಾಥಮಿಕ ಶಾಲೆಗೆ ರೂ.3,000/- ಹಾಗೂ ಹಿರಿಯ ಪ್ರಾಥಮಿಕ ಶಾಲೆಗೆ ರೂ.10,000/- ಒಂದು ಸಲದ ಅನುದಾನ.<br>ಆ) ಸಂಯುಕ್ತ ಪ್ರಾಥಮಿಕ ಶಾಲೆಯಾದಲ್ಲಿ ಗ್ರಂಥಾಲಯಕ್ಕೆ ಒಂದು ಬಾರಿ ರೂ.13,000/- ನೀಡುವುದು. |

| | | | |
|---|---|---|---|
| | | ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಖರೀದಿಸಬೇಕು. ಕೇಂದ್ರೀಕೃತ ಖರೀದಿಗೆ ಅವಕಾಶವಿಲ್ಲ.<br>4. ಪುಸ್ತಕವನ್ನು ಆರಿಸಲು ರಾಜ್ಯವು ವಿಶಾಲವಾದ ಮಾರ್ಗದರ್ಶನ ನೀಡಬಹುದು ಆದರೆ ಇದು ಕಡ್ಡಾಯವಾಗಿರಬಾರದು.<br>5. ರಾಜ್ಯವು ಮಾರ್ಗದರ್ಶನ ಅಭಿವೃದ್ಧಿ ಪಡಿಸಲು ಬಳಸಿದ ಪ್ರಕ್ರಿಯೆಗಳ ದಾಖಲಾತಿಗಳು / ಸ್ಟಾಕ್ / ಅಸೆಟ್ ರಿಜಿಸ್ಟರ್‌ಗಳನ್ನು ಪರಿಶೀಲನೆಗಾಗಿ ಸಂಗ್ರಹಿಸಿಡಬೇಕು.<br>6. ಗ್ರಂಥಾಲಯವನ್ನು ಪರಿಣಾಮಕಾರಿಯಾಗಿ ಬಳಸಲು ಅನುಕೂಲವಾಗುವಂತೆ ಶಿಕ್ಷಕರಿಗೆ ತರಬೇತಿ ಹಾಗೂ ಶಾಲಾ ವೇಳಾಪಟ್ಟಿಯಲ್ಲಿ ಸಮಯನ್ನು ನಿಗದಿಪಡಿಸಲು ಮಾರ್ಗದರ್ಶನ ನೀಡಬೇಕು. | |
| 20 | ಸೀಮ್ಯಾಟ್(SIEMAT) | ಅ) ಆರ್.ಟಿ.ಇ. ಕಾಯಿದೆಯಲ್ಲಿ ವಿವರಿಸಿರುವಂತೆ ಶೈಕ್ಷಣಿಕ ಯೋಜನೆ ತಯಾರಿಕೆ ಮತ್ತು ಆಡಳಿತಾತ್ಮಕ ವಿನ್ಯಾಸ ಮತ್ತು ಸಿಸ್ಟಂನ್ನು ಬಲವರ್ಧನೆಗೊಳಿಸಲು ಅಗತ್ಯವಾದ ವ್ಯಕ್ತಿತ್ವ ಬಲವರ್ಧನೆಯನ್ನು ನೀಡುವಲ್ಲಿ ಸೀಮ್ಯಾಟ್ ಮಹತ್ವದ ಪಾತ್ರ ವಹಿಸುತ್ತದೆ. ಶೈಕ್ಷಣಿಕ ಆಡಳಿತಗಾರರಿಗೆ ತರಬೇತಿ ಮತ್ತು ತರಬೇತಿ ಮಾಡ್ಯೂಲ್‌ಗಳನ್ನು ಸೀಮ್ಯಾಟ್ ಅಭಿವೃದ್ಧಿ ಪಡಿಸುತ್ತದೆ. | ಸರ್ವ ಶಿಕ್ಷಣ ಅಭಿಯಾನವು ಕೆಳಕಂಡ ಅಂಶಗಳಲ್ಲಿ ಸೀಮ್ಯಾಟ್‌ಗೆ ಸಹಕರಿಸುತ್ತದೆ;<br>ಅ) ಒಂದು ಸಲಕ್ಕೆ ರೂ.3.00 ಕೋಟಿಗಳ ಅನುದಾನ.<br>ಆ) ರಾಜ್ಯಸರ್ಕಾರವು ಸೀಮ್ಯಾಟ್‌ನ್ನು ಉಳಿಸಿಕೊಳ್ಳಬೇಕು.<br>ಇ) ಬೋಧನಾ ವಿಭಾಗದ ಆಯ್ಕೆಯ ವಿಧಾನವು ಉತ್ತಮವಾಗಿರಬೇಕು / ಕಠಿಣವಾಗಿರಬೇಕು. |
| 21 | ಎನ್.ಪಿ.ಇ.ಜಿ.ಇ.ಎಲ್. | ಅ) ಎನ್.ಪಿ.ಇ.ಜಿ.ಇ.ಎಲ್ ಚಟುವಟಿಕೆಯು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ, ಶಾಲೆಯಿಂದ ಹೊರಗುಳಿದ, ತಲುಪಲು ಕಠಿಣವಾದ ಪರಿಸ್ಥಿತಿಯ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮ. | ಎನ್.ಪಿ.ಇ.ಜಿ.ಇ.ಎಲ್.ಗೆ ಸರ್ವ ಶಿಕ್ಷಣ ಅಭಿಯಾನದ ಸಹಾಯವೆಂದರೆ;<br>ಅ) ಕೆಳಗಿನ ಷರತ್ತಿಗೆ ಒಳಪಟ್ಟು, ಸರ್ವ ಶಿಕ್ಷಣ ಅಭಿಯಾನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ |

| | | | |
|---|---|---|---|
| | | ಆ)ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳಲ್ಲಿನ ಹೆಣ್ಣು ಮಕ್ಕಳ ಶಿಕ್ಷಣದ ಚಟುವಟಿಕೆಗಳಿಗೆ ಹೊರತಾಗಿ, ಹೆಚ್ಚುವರಿಯಾಗಿ ನೀಡುವ ಅನುದಾನವಾಗಿದೆ.<br>ಇ)ಎಲ್ಲಾ ಕಾರ್ಯತಂತ್ರಗಳು ಹಾಗೂ ಮಧ್ಯವರ್ತನೆಗಳು ಬ್ಲಾಕ್‌ನಲ್ಲಿ ಶಾಲೆಯಲ್ಲಿರುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರಿಯಾಗಿಸಿರಬೇಕು.<br>ಈ) ಶಿಕ್ಷಣದ ಗುಣಮಟ್ಟದಲ್ಲಿ ಅಭಿವೃದ್ಧಿ ಹಾಗೂ ಹೆಣ್ಣು ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವ ಮಧ್ಯವರ್ತನೆಗಳಿಗೆ ಹೆಚ್ಚಿನ ಗಮನ ನೀಡಬೇಕು. ಬ್ಲಾಕ್‌ಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಗುರಿ, ಅದಕ್ಕೆ ಬಳಸುವ ಕಾರ್ಯತಂತ್ರಗಳ ಬಗ್ಗೆ ಹೆಚ್ಚಿನ ವಿವರವಾದ ಹಾಗೂ ಪರಿಣಾಮಕಾರಿಯಾದ ಕಾರ್ಯ ಯೋಜನೆ ಮಾಡಬೇಕು.<br>ಉ) ಪ್ರತಿ ಬ್ಲಾಕ್‌ಗೆ ನೀಡುವ ರೆಕರಿಂಗ್ ಅನುದಾನವು ಅಗತ್ಯಕ್ಕೆ ತಕ್ಕಂತೆ ಇರಬೇಕು ಹಾಗೂ ಕೆಳಗಿನವುಗಳನ್ನು ಒಳಗೊಂಡಿರಬೇಕು;<br>1. ರಿಕರಿಂಗ್ ಅನುದಾನವನ್ನು ಕ್ಲಸ್ಟರ್‌ನಲ್ಲಿನ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮಾಡಲ್ ಕ್ಲಸ್ಟರ್ ಶಾಲೆಯ ನಿರ್ವಹಣೆ, ಹೆಚ್ಚವರಿಯಾದ ನಿರ್ಧರಿತ ವಿಷಯಗಳ ಬೋಧನೆಗೆ ಪಾರ್ಟ್‌ಟೈಮ್ ಬೋಧನಾಕಾರರ ಬಳಕೆಗೆ ಉಪಯೋಗಿಸಬಹುದು.<br>2. ಹೆಣ್ಣು ಮಕ್ಕಳ ದಾಖಲಾತಿ, ಶಾಲೆಯಲ್ಲಿ ಉಳಿಯುವಿಕೆ ಮತ್ತು ಕಲಿಕಾ ಪರಿಣಾಮಗಳ ಅಭಿವೃದ್ಧಿಯಲ್ಲಿ ಗುರಿ ಸಾಧಿಸಿದ ಶಾಲೆ / ಶಿಕ್ಷಕರಿಗೆ ಪ್ರಶಸ್ತಿ ನೀಡಲು. | ಬ್ಲಾಕ್‌ಗಳನ್ನು ಗುರ್ತಿಸಿ, ನಿರ್ಧಿಷ್ಟವಾದ ಯೋಜನೆಗಳನ್ನು ತಯಾರಿಸಿ, ಅದರ ಪರಿಣಾಮವನ್ನು ನಿರ್ಧಿಷ್ಟಪಡಿಸಬೇಕು.<br><br>ಅನಾವರ್ತಕ ಅನುದಾನ (ನಾನ್-ರಿಕರಿಂಗ್ ಗ್ರಾಂಟ್)<br>1) ಹೊಸ ಮಾಡಲ್ ಕ್ಲಸ್ಟರ್ ಕೇಂದ್ರಗಳಿಗೆ ಕಲಿಕಾ ಬೋಧನೋಪಕರಣ, ಗ್ರಂಥಾಲಯ, ಕ್ರೀಡೆ, ವೃತ್ತಿಶಿಕ್ಷಣ ತರಬೇತಿ ಮುಂತಾದವುಗಳಿಗಾಗಿ ಒಂದು ಬಾರಿಗೆ ರಿಕರಿಂಗ್ ಅನುದಾನವಾಗಿ ರೂ.30,000/-ಗಳ ಅನುದಾನ.<br>2) ಹೊಸ ಮಾಡಲ್ ಕ್ಲಸ್ಟರ್ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗಾಗಿ 3 ವರ್ಷದವರೆಗೆ ಕೌಶಲ ಚಟುವಟಿಕೆಗಳ ಅಭಿವೃದ್ಧಿಗಾಗಿ ರೂ.2.00 ಲಕ್ಷಗಳ ಅನುದಾನ (ಹೆಚ್ಚುವರಿ ಕೊಠಡಿ ಕಾರಣಕ್ಕಾಗಿ)<br><br>ಅವರ್ತಕ ಅನುದಾನ (ರಿಕರಿಂಗ್ ಗ್ರಾಂಟ್)<br>ಅ) ಪ್ರತಿ ವರ್ಷ ಪ್ರತಿ ಕ್ಲಸ್ಟರ್‌ಗೆ ರೂ.60,000/-ದಂತೆ ಒಟ್ಟು ಪ್ರತಿ ಬ್ಲಾಕ್‌ನ ಉಪಚಟುವಟಿಕೆಗಳಿಗಾಗಿ.<br>ಆ) ಬ್ಲಾಕ್‌ನ ಅಗತ್ಯತೆಗೆ ತಕ್ಕಂತೆ ಕೆಳಕಂಡ ಚಟುವಟಿಕೆಗಳೂ ಸೇರಿದಂತೆ ರಿಕರಿಂಗ್ ಅನುದಾನ;<br>1. ರಿಕರಿಂಗ್ ಅನುದಾನವನ್ನು ಕ್ಲಸ್ಟರ್‌ನಲ್ಲಿನ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮಾಡಲ್ ಕ್ಲಸ್ಟರ್ ಶಾಲೆಯ ನಿರ್ವಹಣೆ, ಹೆಚ್ಚವರಿಯಾದ ನಿರ್ಧರಿತ ವಿಷಯಗಳ ಬೋಧನೆಗೆ ಪಾರ್ಟ್‌ಟೈಮ್ ಬೋಧನಾಕಾರರ ಬಳಕೆಗೆ ಉಪಯೋಗಿಸಬಹುದು. ಯಾವುದೇ ಬೋಧಕರು ಶೈಕ್ಷಣಿಕ ವರ್ಷದಲ್ಲಿ ಮೂರು ತಿಂಗಳಿಗಿಂತ ಹೆಚ್ಚು ಇರುವಂತಿಲ್ಲ ಹಾಗೂ |

| | | | |
|---|---|---|---|
| | | 3. ಮುಕ್ತ ಶಾಲೆಗಳ ಮೂಲಕ ಶಿಕ್ಷಣ (Learning through open schools)ರಾಜ್ಯದಿಂದ ತೆರೆಯಲಾದ ಮುಕ್ತ ಶಾಲೆಯ ಹೆಣ್ಣು ಮಕ್ಕಳಿಗೆ ಫೀ ಮಾಫಿ, ವಿಶೇಷವಾಗಿ ವಿನ್ಯಾಸಗೊಳಿಸಿದ ಮುಕ್ತ ಶಾಲೆಗಳನ್ನು ಸ್ಥಾಪಿಸಲು ಬಳಸಬಹುದು. ಈ ಉದ್ದೇಶಕ್ಕೆ ಗುರ್ತಿಸಿದ ಅನುಷ್ಠಾನ ಏಜೆನ್ಸಿಯು ರಾಷ್ಟ್ರ ಮತ್ತು ರಾಜ್ಯ ಮುಕ್ತಶಾಲೆಗಳನ್ನು ತೆರೆಯಲು ಅಗತ್ಯವಿರುವ ಹೊಂದಬಹುದಾದ ವ್ಯವಸ್ಥೆ / ವಿನ್ಯಾಸವನ್ನು ರೂಪಿಸುವುದು. ವಸತಿಯುತ ಹಿರಿಯ ಪ್ರಾಥಮಿಕ ಶಾಲೆ / ಸ್ವಯಂಸೇವ ಸಂಘಗಳ ಕೇಂದ್ರವಾಗಿ ಮಾಡಲ್ ಕ್ಲಸ್ಟರ್ ಶಾಲೆಯನ್ನು ಬಳಸಬಹುದು. ಇದು ಶೈಕ್ಷಣಿಕ ವ್ಯವಸ್ಥೆಯಿಂದ ಹೊರಗುಳಿದ ಹೆಣ್ಣು ಮಕ್ಕಳಿಗೆ ಸಹಾಯವಾಗುತ್ತದೆ. ಕಡಿಮೆ ಅವಧಿಯ ವಸತಿಯುತ ಕೋರ್ಸ್‌ಗಳನ್ನು ವ್ಯವಸ್ಥೆ ಮಾಡಬಹುದು.<br>1. 4. ಶಿಶು ಕೇಂದ್ರಗಳು (ಚೈಲ್ಡ್ ಕೇರ್ ಸೆಂಟರ್) : ಐ.ಸಿ.ಡಿ.ಎಸ್. ಯೋಜನೆ ತಲುಪದ ಪ್ರದೇಶಗಳಲ್ಲಿ ಸಿಬ್ಲಿಂಗ್ ಕೇರ್‌ನಿಂದಾಗಿ ಶಾಲೆಯಿಂದ ಹೊರಗುಳಿಯುವ ಹೆಣ್ಣು ಮಕ್ಕಳಿಗಾಗಿ ಎನ್.ಪಿ.ಇ.ಜಿ.ಇ.ಎಲ್.ಅಡಿ ಹೊಸ ಶಿಶುಪಾಲನಾ ಕೇಂದ್ರಗಳನ್ನು ತೆರೆಯಬಹುದು. | ಅವರ ಗೌರವಧನವು ತಿಂಗಳಿಗೆ ರೂ.1,000/- ಮೀರುವಂತಿಲ್ಲ.<br>2. ಕ್ಲಸ್ಟರ್ ಮಟ್ಟದಲ್ಲಿ ಪ್ರತಿ ವರ್ಷಕ್ಕೆ ರೂ.5,000/-ದಂತೆ ಒಂದು ಶಾಲೆ/ಶಿಕ್ಷಕರಿಗೆ ಪ್ರಶಸ್ತಿ ನೀಡಲು ಅವಕಾಶ.<br>3. ಮುಕ್ತ ಶಾಲೆಗಳ ಮೂಲಕ ಶಿಕ್ಷಣ (ಐಜಚಿಡಿಟಿಟಿಂ ಣುಡಿಣಾ ಹಿಜಟಿ ,ಛ್ತಿಟು) : ರಾಷ್ಟ್ರ ಹಾಗೂ ರಾಜ್ಯದಿಂದ ತೆರೆದ ಮುಕ್ತಶಾಲೆಗಳಲ್ಲಿ ಶುಲ್ಕ ಪಾವತಿಗಾಗಿ, ಪೂರಕ ಬೋಧನೆಗಾಗಿ ಪ್ರತಿ ಕ್ಲಸ್ಟರ್‌ಗೆ ವರ್ಷಕ್ಕೆ ಗರಿಷ್ಠ ರೂ.50,000/- ಅನುದಾನದ ಅವಕಾಶ. ಅನುದಾನವನ್ನು ರಾಜ್ಯ ಸಮಿತಿಯು ನೇರವಾಗಿ ರಾಷ್ಟ್ರ / ರಾಜ್ಯದಿಂದ ಸ್ಥಾಪಿತವಾದ ಮುಕ್ತ ಶಾಲೆಗೆ ಬಿಡುಗಡೆ ಮಾಡಲು ಅವಕಾಶವಿದೆ.<br>4. ಶಿಶುಪಾಲನಾ ಕೇಂದ್ರ : ಎನ್.ಪಿ.ಇ.ಜಿ.ಇ.ಎಲ್.ನಡಿ ತೆರೆಯುವ ಪ್ರತಿ ಇ.ಸಿ.ಸಿ.ಇ. ಕೇಂದ್ರಕ್ಕೆ ಹೆಣ್ಣು ಮಕ್ಕಳ ಶಿಕ್ಷಣದಡಿ ಸರ್ವ ಶಿಕ್ಷಣ ಅಭಿಯಾನವು ಪ್ರತಿ ವರ್ಷಕ್ಕೆ ರೂ.5,000/- ರೆಕರಿಂಗ್ ಅನುದಾನ ಹಾಗೂ ರೂ.1,000/- ನಾನ್ ರಿಕರಿಂಗ್ ಅನುದಾನ ನೀಡುತ್ತದೆ.<br>ಇ) ಹೆಚ್ಚುವರಿ ಪ್ರೋತ್ಸಾಹಕಗಳು : ಸರ್ವ ಶಿಕ್ಷಣ ಅಭಿಯಾನದಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಉಚಿತ ಪಠ್ಯಪುಸ್ತಕ ನೀಡಲು ಕಿರಿಯ ಪ್ರಾಥಮಿಕ ಶಾಲೆಗೆ ರೂ.150/- ಹಾಗೂ ಹಿರಿಯ ಪ್ರಾಥಮಿಕ ಶಾಲೆಗೆ ರೂ.250/-ಗಳ ಅನುದಾನ ನೀಡುತ್ತದೆ. ಒಂದು ವೇಳೆ, ಈ ಅನುದಾನದಲ್ಲಿ ಉಳಿಕೆಯಾದರೆ, ಅದನ್ನು ಹೆಚ್ಚುವರಿ ಸಾಮಗ್ರಿಗಳಾದ ಕಾಗದ ಸಾಮಗ್ರಿಗಳು, ಸ್ಲೇಟ್‌ಗಳು, ವರ್ಕ್ ಬುಕ್‌ಗಳು, ಸಮವಸ್ತ್ರ(ಸರ್ವ ಶಿಕ್ಷಣ ಅಭಿಯಾನದಡಿ ನೀಡದಿರುವ) ಹಾಗೂ ಕಠಿಣ ಸ್ಥಳಗಳಲ್ಲಿ ರಕ್ಷಣೆ ನೀಡಲು |

| | | | |
|---|---|---|---|
| | | | ಉಪಯೋಗಿಸಬಹುದು.<br>ಈ) ಆಡಳಿತಾತ್ಮಕ ವೆಚ್ಚ (ಕಮ್ಯೂನಿಟಿ ಮೊಬಿಲೈಸೇಷನ್ ಸೇರಿದಂತೆ) : ಸರ್ವ ಶಿಕ್ಷಣ ಅಭಿಯಾನದಡಿ ದೊರೆಯುವ ಎಲ್ಲಾ ಚಟುವಟಿಕೆಗಳಲ್ಲದೇ, ಒಟ್ಟು ಜಿಲ್ಲೆಯ ಅನುದಾನದಲ್ಲಿ 6% ಆಡಳಿತಾತ್ಮಕ ವೆಚ್ಚಕ್ಕಾಗಿ ಎನ್.ಪಿ.ಇ.ಜಿ.ಇ.ಎಲ್.ಅಡಿ ಅವಕಾಶ ಇರುವುದು.<br>ಉ) ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪೂರಕವಾಗುವ ಸನ್ನಿವೇಶಗಳಿಗಾಗಿ, ಹೆಣ್ಣು ಮಕ್ಕಳ ದಾಖಲಾತಿಗಾಗಿ, ಶಾಲೆಯಲ್ಲಿ ಉಳಿಯುವಿಕೆಗಾಗಿ ಹಾಗೂ ಕಲಿಕೆಯ ಮಟ್ಟದ ಅಭಿವೃದ್ಧಿಗಾಗಿ ಅಗತ್ಯವಿರುವ ಸಮಗ್ರ ಸಮುದಾಯ ಜಾಗೃತಿ ಕಾರ್ಯಕ್ರಮಗಳನ್ನು ಆಡಳಿತಾತ್ಮಕ ವೆಚ್ಚದಡಿ ಇರುವ ಅನುದಾನದಿಂದ ನಡೆಸಬಹುದು.<br>ಊ) ಎಂ.ಐ.ಎಸ್. ಹಾಗೂ ದಾಖಲೀಕರಣ, ಕ್ಲಸ್ಟರ್ ಕೋ-ಆರ್ಡಿನೇಟರ್‌ಗಳ ಗೌರವಧನ ಹಾಗೂ ಪ್ರವಾಸಭತ್ಯೆ/ದಿನಭತ್ಯೆ, ಕ್ಲಸ್ಟರ್ ಮಟ್ಟದಲ್ಲಿ ಸಭೆಗಳಿಗೂ ಆಡಳಿತಾತ್ಮಕ ವೆಚ್ಚದಡಿ ಅನುದಾನವನ್ನು ಭರಿಸಬಹುದು. |
| 22 | ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆ.ಜಿ.ಬಿ.ವಿ.) | ಅ) ಹಿರಿಯ ಪ್ರಾಥಮಿಕ ಶಾಲೆಯ ಮಟ್ಟದ ಪ.ಜಾತಿ / ಪ.ಪಂಗಡ, ಇತರೆ ಹಿಂದುಳಿದ ಗುಂಪುಗಳು ಹಾಗೂ ಅಲ್ಪಸಂಖ್ಯಾತ ಗುಂಪುಗಳಿಗೆ ಸೇರಿದ ಹೆಣ್ಣು ಮಕ್ಕಳಿಗಾಗಿ ವಸತಿಯುತ ಶಾಲೆಯನ್ನು ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯವಾಗಿ (ಕೆ.ಜಿ.ಬಿ.ವಿ.) ಒದಗಿಸಲಾಗಿದೆ. ಕೆ.ಜಿ.ಬಿ.ಸಿ. ಶಾಲೆಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ, ಹೆಣ್ಣು ಮಕ್ಕಳ ಸಾಕ್ಷರತೆ ರಾಷ್ಟ್ರಮಟ್ಟಕ್ಕಿಂತ ಕಡಿಮೆ ಇರುವ (2001ರ ಜನಗಣತಿ ಪ್ರಕಾರ 46.13%ಗಿಂತ ಕಡಿಮೆ ಇರುವ) ಹಾಗೂ | ಸರ್ವ ಶಿಕ್ಷಣ ಅಭಿಯಾನವು ಕೆ.ಜಿ.ಬಿ.ವಿ.ಗೆ ಕೆಳಕಂಡಂತೆ ಸಹಕರಿಸುತ್ತದೆ;<br>ಅ) 2001ರ ಜನಗಣತಿಯಂತೆ ರಾಷ್ಟ್ರೀಯ ಮಹಿಳಾ ಸಾಕ್ಷರತೆಗಿಂತ ಕಡಿಮೆ ಇರುವ ಮಹಿಳಾ ಸಾಕ್ಷರತೆ ಇರುವ ಎಲ್ಲಾ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ ಕೆ.ಜಿ.ಬಿ.ವಿ. ಶಾಲೆಯನ್ನು ತೆರೆಯಬಹುದು.<br>ಆ) ಸಂಬಂಧಿಸಿದ ರಾಜ್ಯವು ನಿಗದಿಪಡಿಸಿದ ದರಪಟ್ಟಿಯಂತೆ ಕೆ.ಜಿ.ಬಿ.ವಿ. ಶಾಲಾ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವುದು. |

| | | | |
|---|---|---|---|
